ಯಕ್ಷಗಾನ

ಚಂದ್ರಗುಪ್ತ ಚಾಣಿಕ್ಯರ ಚರಿತ್ರೆ

(ದ್ವಿತೀಯ ಸಂಪುಟ)

ಜಾಣ ಮಂಜಪ್ಪ

Scanned by CamScanner

ಯಕ್ಷಗಾನ

ಚಂದ್ರಗುಪ್ತ ಚಾಣಿಕ್ಯರ ಚರಿತ್ರೆ

(ದ್ವಿತೀಯ ಸಂಪುಟ)

ಮುದ್ರಾರಾಕ್ಷಸೆ
ರಾಕ್ಷಸನ ನಿರಸನ ಕಥಾ
ಚಂದ್ರಗುಪ್ತನ ಪಟ್ಟಾಭಿಷೇಕ

ಲೇಖಕರು :

ಜಾಣ ಮಂಜಪ್ಪ, ಕೆರೆಕೊಪ್ಪ

ಪ್ರಕಾಶಕರು :

ಜಾಣ ಮಂಜಪ್ಪನವರು ಕೆರೆಕೊಪ್ಪ
ಅಂಚೆ : ನಿಸರಾಣಿ
ಸೊರಬ ತಾಲ್ಲೂಕು :: ಶಿವಮೊಗ್ಗ ಜಿಲ್ಲೆ

Scanned by CamScanner

ಚಂದ್ರಗುಪ್ತ ಚಾಣಿಕ್ಯರ ಚರಿತ್ರೆ ಎಂಬ ಯಕ್ಷಗಾನ ಪ್ರಸಂಗಗಳು ಶ್ರೀ ಜಾಣ ಮಂಜಪ್ಪ, ಕೆರೆಕೊಪ್ಪ ಇವರಿಂದ ಬರೆಯಲ್ಪಟ್ಟು, ದುರ್ಗಾ ಪ್ರಿಂಟರ್ಸ್, ಸಾಗರ ಇವರಿಂದ ಮುದ್ರಿಸಲ್ಪಟ್ಟು, ಶ್ರೀ ಜಾಣ ಮಂಜಪ್ಪ, ಕೆರೆಕೊಪ್ಪ, ಅಂಚೆ: ನಿಸರಾಣಿ ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರಿಂದ ಪ್ರಕಾಶನಗೊಂಡಿದೆ. ಪ್ರಥಮ ಮುದ್ರಣ : ಡಿಸೆಂಬರ್ ೧೯೮೧; ಪುಟಗಳು, ೧೧೨+೮; ಪ್ರತಿಗಳು : ೫೦೦.

ಎಲ್ಲಾ ಹಕ್ಕುಗಳು ಲೇಖಕರದ್ದಾಗಿರುತ್ತದೆ.

ಬೆಲೆ : ಆರು ರೂಪಾಯಿಗಳು

ಮಾನ್ಯ ಕಲಾಭಿಮಾನಿಗಳಲ್ಲಿ ವಿನಂತಿ....

ನಾನು ಈ ಹಿಂದೆ ಕಲಾಮಾತೆಗೆ ಕಾಣಿಕೆಯಾಗಿ ಅರ್ಪಿಸಲು ರಚಿಸಿದ ಹತ್ತು ಯಕ್ಷಗಾನ ಆಖ್ಯಾನಗಳಲ್ಲಿ ಈ ಮೊದಲೇ ಏಳು ಕೃತಿಗಳು ಮುದ್ರಣಗೊಂಡು ಕಲಾಕ್ಷೇತ್ರಗಳಿಗೆ ಅರ್ಪಿಸಲಾಗಿದೆ. "ಮುದ್ರಾರಾಕ್ಷಸ" ರಾಕ್ಷಸನಿರಶನಕಥಾ" ಚಂದ್ರಗುಪ್ತನ ಪಟ್ಟಾಭಿಷೇಕ" ಈ ಮೂರು ಯಕ್ಷಗಾನ ಪ್ರಸಂಗಗಳು ಈ ಸಂಪುಟದಲ್ಲಿ ಮುದ್ರಣಗೊಂಡಿದೆ. ಇಲ್ಲಿಗೆ ನನ್ನ ಕರ್ತವ್ಯ ಮುಗಿಯಿತು. ಕಲಾವಿದರು ಕೃತಿಗಳನ್ನು ರಂಗಭೂಮಿಗೆ ತಂದು ಕಲಾಭಿಮಾನಿಗಳಾದ ಪ್ರೇಕ್ಷಕರ ಇಂದ್ರಿಯಗಳಿಗೆ ತೃಪ್ತಿಪಡಿಸುವ ಭಾರವು ಮಾನ್ಯ ನಟರ, ಭಾಗವತರ ಮತ್ತು ಮೃದಂಗವಾದಕರುಗಳ ಮೇಲಿದೆ. ಈ ಹೊರೆಯನ್ನು ಕಾಲದಲ್ಲಿಯೇ ಇಳಿಸಿಕೊಳ್ಳುವರೆಂದು ನನ್ನ ನಂಬಿಕೆ.

ಕೃತಿಗಳ ವಿಮರ್ಶೆಯಿಂದ ಮುನ್ನುಡಿಯನ್ನು ಬರೆದುಕೊಟ್ಟ ಶ್ರೀಯುತ ಜಿ. ಎಸ್. ಭಟ್, ಕನ್ನಡ ವಿಭಾಗ, ಲಾಲ್ ಬಹದೂರ್ ಕಲಾ, ವಿಜ್ಞಾನ ಮತ್ತು ಎಸ್. ಬಿ. ಸೊಲಬಣ್ಣ ಶೆಟ್ಟಿ ವಾಣಿಜ್ಯ ಕಾಲೇಜು, ಸಾಗರ ಇವರಿಗೂ,

ಈ ಸಂಪುಟವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಸಾಗರದ ದುರ್ಗಾ ಪ್ರಿಂಟರ್ಸ್ ಮಾಲೀಕರಾದ ಶ್ರೀ ಹೆಚ್. ಎನ್. ಶಶಿಧರಶರ್ಮರಿಗೂ ಮತ್ತು ಕಾರ್ಯನಿರ್ವಾಹಕ ಮಂಡಲಿ ಇವರಿಗೂ, ಕಲಾಭಿಮಾನಿಗಳಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳು.

—ಬೇಳೂರು ಜಾಣಮಂಜಪ್ಪ
ಕೆರೆಕೊಪ್ಪ ಗ್ರಾಮ
ಅಂಚೆ : ನಿಸರಾಣಿ
ಸೊರಬ ತಾ|| :: ಶಿವಮೊಗ್ಗ ಜಿಲ್ಲೆ

Scanned by CamScanner

ಮೊದಲ ಮಾತು

ವಯೋವೃದ್ಧರೂ ಜ್ಞಾನವೃದ್ಧರೂ ಆದ ಶ್ರೀ ಜಾಣ ಮಂಜಪ್ಪನವರು ತಮ್ಮ ಯಕ್ಷಗಾನ ಪ್ರಸಂಗಕೃತಿಗಳಿಗೆ ನನ್ನಿಂದ ಮುನ್ನುಡಿ ಬರೆಯಿಸಲು ಈ ಮೊದಲೇ ಪ್ರಯತ್ನಿಸಿದ್ದು ನನಗೆ ಈ ಸಂದರ್ಭದಲ್ಲಿ ನೆನಪಾಗುತ್ತದೆ. ಯೋಗ್ಯರಾದ ಬೇರೆಯವರಿಂದ ಬರೆಯಿಸಿಕೊಡುವ ಭರವಸೆ ಕೊಟ್ಟೆನೇ ವಿನಾ ನಾನು ಬರೆಯಲು ಧೈರ್ಯ ಮಾಡಲಿಲ್ಲ. ನನ್ನ ಯೋಗ್ಯತೆ ಹಾಗೂ ಅನುಭವದ ಮಿತಿಯ ಮುಲಾಜೇ ಅದಕ್ಕೆ ಕಾರಣ. ಮಾನ್ಯ ಮಂಜಪ್ಪನವರ ವಯಸ್ಸು, ಅನುಭವದ ಎದುರು ನನ್ನದೇನೂ ಅಲ್ಲವಾದುದರಿಂದಲೂ ಯಕ್ಷಗಾನಸಂಬಂಧಿ ವಿಚಾರಗಳ ಬಗ್ಗೆ ನನ್ನ ಜ್ಞಾನವ್ಯಾಪ್ತಿ ಅಷ್ಟಕ್ಕಷ್ಟೇ ಆಗಿರುವುದರಿಂದಲೂ ಈಗಲೂ ನಾನು ಅಳುಕುತ್ತಲೇ ಈ ಮಾತುಗಳನ್ನು ದಾಖಲೆ ಮಾಡುತ್ತಿದ್ದೇನೆ.

ಶ್ರೀ ಜಾಣ ಮಂಜಪ್ಪನವರ ಈ ಪ್ರಸಂಗಕೃತಿಯಲ್ಲಿ ಮೂರು ಪ್ರತ್ಯೇಕ ಭಾಗಗಳಿವೆ. " ಮುದ್ರಾ ರಾಕ್ಷಸ " ಮೊದಲ ಭಾಗ. " ಅಮಾತ್ಯ ರಾಕ್ಷಸನ ನಿರಸನಕಥಾ " ಎರಡನೆಯದು. " ಚಂದ್ರಗುಪ್ತ ಪಟ್ಟಾಭಿಷೇಕ " ಮೂರನೆಯದು. ಇವೆಲ್ಲಕ್ಕೂ ಒಟ್ಟಿನಲ್ಲಿ ಚಂದ್ರಗುಪ್ತ ಚಾಣಕ್ಯರ ಕಥೆಯೇ ಮೂಲ. ಇದೇ ಕಥೆಯ ಮೊದಲ ವಿವರಗಳನ್ನು ಕುರಿತಂತೆ ರಚನೆಯಾದ ಶ್ರೀಯುತರ " ಯಕ್ಷಗಾನ ಚಂದ್ರಗುಪ್ತ ಚಾಣಕ್ಯರ ಚರಿತ್ರೆ, ಚಂದ್ರಗುಪ್ತನ ಬಂಧವಿಮೋಚನೆ, ಅಮಾತ್ಯ ರಾಕ್ಷಸನ ಭೇದೋಪಾಯ ಭಂಗ, ನವನಂದರ ನಿರ್ಯಾಣ " ಭಾಗಗಳನ್ನು ಒಳಗೊಂಡು ಈಗಾಗಲೇ ಬೆಳಕುಕಂಡು ಸಹೃದಯರ ಮೆಚ್ಚುಗೆ ಪಡೆದಿವೆ. ಪ್ರಸ್ತುತ ಪ್ರಸಂಗದಲ್ಲಿ ಪರ್ವತರಾಜ ವಿಷಕನ್ಯೆಯಿಂದ ಸತ್ತಮೇಲೆ ಚಾಣಕ್ಯ ಆತನ ಮಕ್ಕಳು ಹಾಗೂ ತಮ್ಮಂದಿರನ್ನ ಪಾಟಲಿಪುತ್ರಕ್ಕೆ ಕರೆತಂದು ರಾಜ್ಯಾರ್ಧವನ್ನು ಕೊಟ್ಟಲ್ಲಿಂದ ತೊಡಗಿ ಚಂದ್ರಗುಪ್ತನ ಪಟ್ಟಾಭಿಷೇಕದ ವರೆಗಣ ಕಥೆಯಿದೆ.

ಚಂದ್ರಗುಪ್ತಚಾಣಕ್ಯರ ಕಥೆ ಮೂಲತಃ ಐತಿಹಾಸಿಕವಾದುದು. ಇದನ್ನು ಬಳಸಿಕೊಂಡು ವಿಶಾಖಾದತ್ತ ಸಂಸ್ಕೃತದಲ್ಲಿ ಪ್ರಸಿದ್ಧ ನಾಟಕ ಬರೆದ. ಕೆಂಪುನಾರಾಯಣನ " ಮುದ್ರಾಮಂಜೂಷ "ದಿಂದ ಈ ಕಥೆ ಕನ್ನಡಕ್ಕೂ ದಾಟಿತು. ಕಾಲಕ್ರಮದಲ್ಲಿ ಅನುವಾದ, ರೂಪಾಂತರಗಳ ಮೂಲಕ ವಿಶಾಖಾದತ್ತನ ನಾಟಕಗಳೂ ಕನ್ನಡಕ್ಕೆ ಬಂದವು. ಶ್ರೀ ಜಾಣಮಂಜಪ್ಪನವರ ಈ ಪ್ರಸಂಗದಿಂದ ಕಥೆ ಯಕ್ಷಗಾನದ ಪರಿಧಿಗೂ ಈಗ ಬಂದಹಾಗಾಯಿತು. ಯಕ್ಷಗಾನ ಪ್ರಸಂಗಕೃತಿಗಳಿಗೆ ಐತಿಹಾಸಿಕ ವಸ್ತುವನ್ನು ಬಳಸಿಕೊಳ್ಳುವ ಇತ್ತೀಚಿನ ಸಂಪ್ರದಾಯಕ್ಕೆ ಪ್ರಾತಿನಿಧಿಕವೂ ಆಯಿತು.

ಕನ್ನಡದ ಅಭಿಜಾತದ ಜತೆಜತೆಗೇ ಕಾಲದುದ್ದಕ್ಕೂ ಸರಿದೊರೆಯಾಗಿ ಬೆಳೆದುಬಂದ ಯಕ್ಷಗಾನ ಪ್ರಸಂಗ ಸಾಹಿತ್ಯ ತನ್ನ ಮೂಲ ಆಕರಕ್ಕಾಗಿ ಹೆಚ್ಚಿನಸಲ ಸಂಸ್ಕೃತ, ಕನ್ನಡ ಕಾವ್ಯಗಳನ್ನೇ ಅವಲಂಬಿಸಿದೆ. ಕೃಷ್ಣಾರ್ಜುನಕಾಳಗ (ಗಯಚರಿತ್ರೆ), ದ್ರೌಪದಿ ಪ್ರತಾಪ, ರಾಮಾಂಜನೇಯ ಕಾಳಗದಂಥ ವಿರಳ ಪ್ರಸಂಗಗಳಿಗೆ ಮಾತ್ರ ಮೂಲ ಹುಡುಕುವುದು ಕಷ್ಟವಾದೀತು. ಮುದ್ದಣ ಕವಿಯ ರತ್ನಾವತೀ ಕಲ್ಯಾಣದಂಥ ಕಾಲ್ಪನಿಕ ಕಥೆಗಳೂ ಬಂದಿವೆ. ಆದರೆ ಮಹಾಕಾವ್ಯಗಳ ವಿಸ್ತೃತ ಹರಹಿನಲ್ಲಿ ತನಗೆ ಬೇಕಾದ ಸಂದರ್ಭವನ್ನು ಎತ್ತಿಕೊಂಡು ಯಕ್ಷಗಾನ ಪ್ರಸಂಗ ರಚಿಸುವಲ್ಲಿ ಅನೇಕ ಪ್ರಸಂಗಕರ್ತರು ತಮ್ಮತನ ತೋರಿಸಿದ್ದಾರೆ. ಮೇಲುನೋಟಕ್ಕೆ ಅಭಿಜಾತ ಕಾವ್ಯಗಳ ಯಕ್ಷಗಾನದ ರೂಪಮಾತ್ರವೆಂದು ತೋರಿದರೂ, ಆಳ ಅಧ್ಯಯನದಿಂದ ಕಥಾಭಿತ್ತಿ, ಸನ್ನಿವೇಶ ನಿರ್ಮಾಣ, ಶೀಲಸ್ವಭಾವ ಚಿತ್ರಣ, ಶ್ರದ್ಧೆ ನಂಬಿಕೆಗಳ ನಿರೂಪಣೆ, ಭಾಷೆ ಹಾಗೂ ಛಂದಸ್ಸಿನ ಶೈಲಿಯಲ್ಲಿ ಬೆರಗುಗೊಳಿಸುವಂತಹ ಸ್ವಂತಿಕೆ ತೋರಿದ್ದಾರೆ. ಮೂಲಕಥೆಯಲ್ಲಿರುವ ದೌರ್ಬಲ್ಯಗಳನ್ನು ಕಲಾತ್ಮಕವಾಗಿ ಪರಿಹರಿಸಿದ್ದಾರೆ. ಸಾಂಪ್ರದಾಯಿಕ ಪ್ರಸಂಗಗಳ ಅಧ್ಯಯನದಿಂದ ಹೇರಳ ನಿದರ್ಶನ ಒದಗಿಸಬಹುದು. ಇಷ್ಟಾದರೂ ಅಭಿಜಾತ ಸಾಹಿತ್ಯಾಭ್ಯಾಸಿಗಳ, ಚರಿತ್ರಕಾರರ ಅಸಡ್ಡೆಗೆ ಯಕ್ಷಗಾನ ಪ್ರಸಂಗಸಾಹಿತ್ಯ ತುತ್ತಾದುದು ದುರ್ದೈವದ ಸಂಗತಿ.

ಮೂಲವನ್ನು ಎಲ್ಲಿಂದಲೇ ಸ್ವೀಕರಿಸಲಿ, ರಚನೆಯಲ್ಲಿ ರಂಗದೃಷ್ಟಿಯನ್ನು ಚೆನ್ನಾಗಿ ಇಟ್ಟುಕೊಂಡವರಿದ್ದಾರೆ. ಕೆಲಸಲ ಪ್ರಸಂಗರಚನೆ ಚೆನ್ನಾಗಿ ಆಗದಿದ್ದರೂ ರಂಗದಲ್ಲಿ ಯಶಸ್ಸು ಕಂಡ ಪ್ರಸಂಗಗಳಿವೆ. ಬ್ರಹ್ಮಕಪಾಲ, ಗದಾಪರ್ವದಂತಹ ಪ್ರಸಂಗಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಈ ಮಾತನ್ನಾಡಬೇಕಾಗುತ್ತದೆ. ಹಾಗೇ ರಚನೆ ಚೆನ್ನಾಗಿದ್ದು ರಂಗದಲ್ಲಿ ಸೋಲುಕಂಡ ಮುದ್ದಣನ ಕುಮಾರವಿಜಯ, ಭೀಮನ ' ರಾಜಸೂಯ ' ದಂಥ ಪ್ರಸಂಗಗಳಿವೆ. ರಚನೆಯೂ ಚೆನ್ನಾಗಿದ್ದು ರಂಗದಲ್ಲಿಯೂ ಗೆಲುವು ಕಂಡ ವಿರಾಟಪರ್ವ, ಸುಭದ್ರಾಕಲ್ಯಾಣ, ನಳದಮಯಂತಿ, ಹರಿಶ್ಚಂದ್ರಕಥಾದಂಥ ಪ್ರಸಂಗಗಳಿವೆ. ಹಾಗಾಗಿ ರಚನೆಯ ಯಶಸ್ಸು ಹಾಗೂ ಪ್ರಯೋಗ ಯಶಸ್ಸು ಇವೆರಡನ್ನೂ ಸರಿದೂಗಿಸುವುದು ಕಷ್ಟವೆಂದು ನನ್ನ ಭಾವನೆ. ಈ ಹಿನ್ನೆಲೆಯಲ್ಲಿ ಹಲವು ವಸ್ತುವೈವಿಧ್ಯವುಳ್ಳ ಪ್ರಸಂಗಗಳು ರಚನೆಗೊಳ್ಳುತ್ತಿದ್ದರೂ ಸಂಪ್ರದಾಯಬದ್ಧ ಮೇಳ ನಿರಂತರವಾಗಿ ಸಶಕ್ತ ಹೊಸ ಪ್ರಸಂಗಗಳ ಕೊರತೆಯನ್ನು ಅನುಭವಿಸುತ್ತದೆ.

ಶ್ರೀ ಜಾಣಮಂಜಪ್ಪನವರ ಈ ಪ್ರಸಂಗ ರಚನೆಯ ದೃಷ್ಟಿಯಿಂದ ಸಾಂಪ್ರದಾಯಿಕ ಶ್ರೇಣಿಯಲ್ಲಿ ನಿಲ್ಲುತ್ತದೆ. " ವರಕವಿಯು ನಾನಲ್ಲ, ಸಂಸ್ಕೃತವಿರದು ಎನ್ನಲಿ, ಛಂದಶ್ಶಾಸ್ತ್ರದ ಪರಿವಿಮತಿಯಿಲ್ಲೆನಗೆ ಯತಿಗಣಪ್ರಾಸಗಳ ನಾನರಿಯೆ " ಎಂದು ಶ್ರೀಯುತರು ಹೇಳಿಕೊಂಡಿದ್ದರೂ ಯಕ್ಷಗಾನದ ವಿವಿಧ ತಾಳರಾಗನಿಬದ್ಧ ಪದ್ಯಗಳನ್ನು ಅಡೆತಡೆಯಿಲ್ಲದೆ ಬರೆದುಕೊಂಡು ಹೋಗಬಲ್ಲರು. ಯಕ್ಷಗಾನ ಕೃತಿಗಳಲ್ಲಿ ವಿರಳವಾಗಿರುವಂತಹ ಚಂಪಕವೃತ್ತವನ್ನೂ ಸಲೀಸಾಗಿ ರಚಿಸಬಲ್ಲರು. ಸಂಗತಿಗಳನ್ನು ಪದ್ಯವಾಗಿ ಮಾರ್ಪಡಿಸುವ ಕಲೆ ಶ್ರೀ ಮಂಜಪ್ಪನವರಿಗೆ ದೈವದತ್ತವಾಗಿ

Scanned by CamScanner

ಬಂದಿದೆ. ಅವರ ' ರಾಜಾಬ್ರುಹದ್‌ರಥ ' ದಂತಹ ಪ್ರಸಂಗವನ್ನು ವೃತ್ತಿಮೇಳದವರು ಆಡಿ ಯಶಸ್ಸು ಗಳಿಸಿದ್ದಾರೆ. ಶ್ರೀಯುತರು ರಚಿಸಿದ ಶ್ರೀಕೃಷ್ಣ ವಿಜಯ, ಸುದರ್ಶನ ಮಾಗಧ ಪರಾಜಯ, ಶೀಲವತಿ, ಸುದರ್ಶನೆ ಪ್ರಸಂಗಗಳು ' ಯಕ್ಷಗಾನತ್ರಯ ' ಶೀರ್ಷಿಕೆಯಲ್ಲಿ ಪ್ರಕಟಗೊಂಡಿವೆ. ಆದ್ದರಿಂದ ಶ್ರೀ ಜಾಣಮಂಜಪ್ಪನವರ ಈ ಪ್ರಸಂಗ ಸಹ ಯಕ್ಷಗಾನ ಪ್ರಸಂಗ ಸಾಹಿತ್ಯದ ಇತಿಹಾಸದಲ್ಲಿ ಒಂದು ಮಹತ್ವದ ಕೊಡುಗೆ ಯಾದೀತೆಂಬ ಭಾವನೆ ನನಗಿದೆ.

ಈ ಪ್ರಸಂಗವನ್ನು ರಂಗಪ್ರಯೋಗಕ್ಕೂ ಎತ್ತಿಕೊಂಡರೆ ಮುಖ್ಯವಾದ ಸವಾಲಾದೀತು. ಕಥೆಯ ಯಾವ ವಿವರವನ್ನು ಬಿಡಬಾರದೆಂಬ ಉತ್ಸಾಹ ಸನ್ನಿವೇಶ ರಚನೆಯಲ್ಲಿ ಹ್ರಸ್ವ, ದೀರ್ಘಕ್ಕೆ ಎಡೆಕೊಟ್ಟಿದೆ. ಕಾರಣ ಕಥೆಯ ಓಟಕ್ಕೆ ತೊಂದರೆ ತಾರದಂತೆ, ತೀವ್ರವಾಗುವ ಸನ್ನಿವೇಶವನ್ನು ಮಾತ್ರ ಇಟ್ಟುಕೊಳ್ಳ ಬೇಕಾದೀತು. ಹೆಚ್ಚು ಸಂಖ್ಯೆಯ ವೇಷಗಳು ಬೇಕು. ಅಲ್ಲದೆ ಐತಿಹಾಸಿಕ ಕಥೆ ಯಾದುದರಿಂದ ವೇಷಗಳ ಭೂಷಣಗಳ ಬಗ್ಗೆ ಸಾಕಷ್ಟು ಯೋಚಿಸಬೇಕಾದೀತು. ಅರ್ಥಧಾರಿಗಳೂ ಮೇಧಾವಿಗಳಾಗಿರಬೇಕು. ಗಾತ್ರ ಕೂಡ ಅಡಚಣೆಯಾಗಬಲ್ಲದು. ಇಷ್ಟಾದರೂ ಇದೊಂದು ವ್ಯಾಖ್ಯಾನ ಪ್ರಧಾನ ಆಖ್ಯಾನವಾಗಬಹುದು.

' ಮುದ್ರಾರಾಕ್ಷಸ ' ಪ್ರಸಂಗವಾದುದರಿಂದಲೋ ಏನೋ ಮುದ್ರಣದಲ್ಲಿ ಮುದ್ರಾರಾಕ್ಷಸನ ಹಾವಳಿ ವಿಪರೀತವಾಗಿಬಿಟ್ಟಿದೆ. ಪದಗಳ ಕಾಗುಣಿತಗಳ ದೋಷ ವಷ್ಟೇ ಅಲ್ಲ, ಯತಿಸ್ಥಾನ, ಅವಕಾಶಸ್ಥಾನಗಳೂ ಅಸಹ್ಯವಾಗುವಷ್ಟು ತಪ್ಪಾಗಿವೆ. ಇದರಿಂದ ಅನೇಕ ಪದಗಳ ನಿಖರತೆಯ ಬಗ್ಗೆ ಗುಮಾನಿಯುಂಟಾಗುತ್ತದೆ.

ತಮ್ಮ ಎಂಬತ್ತೆರಡನೆಯ ವಯಸ್ಸಿನಲ್ಲಿಯೂ ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ತನ್ನ ಅಭಿರುಚಿಗಾಗಿ ಮಾತ್ರ ನಿರಂತರ ಶ್ರಮಿಸುವ ಶ್ರೀ ಜಾಣಮಂಜಪ್ಪನವರ ಅದಮ್ಯ ಉತ್ಸಾಹ ತರುಣರನ್ನು ನಾಚಿಸುತ್ತದೆ. ಅವರ ಈ ಶ್ರದ್ಧೆ, ಉತ್ಸಾಹ ಯಕ್ಷಗಾನದ ಭಾಗ್ಯ. ಇಂಥವರ ಪ್ರಸಂಗಕೃತಿಗೆ ಮುನ್ನುಡಿ ಬರೆಯುವುದು ನನ್ನ ಬದುಕಿನ ಮಹತ್ವದ ಕ್ಷಣ. ಈ ಗೌರವಭಾವನೆಯಿಂದಲೇ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

—ಜಿ. ಎಸ್. ಭಟ್,
ಕನ್ನಡ ವಿಭಾಗ,
ಲಾಲ್‌ಬಹಾದ್ದೂರ್ ಕಲಾ, ವಿಜ್ಞಾನ,
ಮತ್ತು ಎಸ್.ಬಿ. ಸೊಲಬಣ್ಣ ಶೆಟ್ಟಿ ವಾಣಿಜ್ಯ
ಮಹಾ ವಿದ್ಯಾಲಯ, ಸಾಗರ.

೨೪, ಡಿಸೆಂಬರ್ ೧೯೮೧

ಪುಸ್ತಕವನ್ನು ಓದುವಾಗ ಶುದ್ಧಾಶುದ್ಧ ಪತ್ರಿಕೆಯನ್ನು ನೋಡಿ ಪದ್ಯಗಳನ್ನು ತಿದ್ದಿಕೊಂಡು ಓದಬೇಕಾಗಿ ವಿನಂತಿ.

ಪೇಜು	ಪದ್ಯದ ಪಂಕ್ತಿ	ತಪ್ಪು	ಒಪ್ಪು
1	2	ನಾಗೇಂದ್ರಾಧ್ವಂಸತಲ್ಪಂ	ನಾಗೇಂದ್ರಾಧ್ವರ್ಷತಲ್ಪಂ
2	21	ಭಾಸ್ಕರಗೇ	ಭಾಸ್ಕರಗೆ
3	9	ಸೀಲೆಪರುವತನಸುವ	ಲೀಲೆಪರುವತನಸುವ
3	23	ಯವಡಿಸುತ	ಯಪಡಿಸುತ
4	3	ಳೀಂದ್ರುನೀಲದ	ಳೀಂದ್ರನೀಲದ
4	15	ಕಲಿತಕೌಸಲವ	ಕಲಿತಕೌಸಲ್ಯವ
5	8	ಅರಹುತಾ	ಅರುಹುತಾ
6	11	ಗುಪ್ತಿಯನೆಳೆಯುತ	ಗುಪ್ತಿಯನೆ ಎಳೆಯುತ
6	22	ಕೃತ್ತಿಮ	ಕೃತ್ರಿಮ
7	1	ಭುದ	ಬುಧ
7	3	ತೆಗೆಯಲಿಕ	ತೆಗೆಯಲಿಕೆ
7	5	ವಿಭುದ	ವಿಬುಧ
7	14	ನುಳಿದ	ನುಸುಳಿದ
7	14	ವಿಭುದನು	ವಿಬುಧನು
7	18	ವಿಭುದನು	ವಿಬುಧನು
7	21	ತಿಳುಹಿದನನು	ತಿಳುಹಿದನು
7	23	ಈಗಲಿ।	ಈಗಲೀ
8	9	ಒಮ್ಮೆಲೆ	ಒಮ್ಮೆಲೇ
8	11	ನನ್ನದಲ್ಲವೆನಲು	ನನ್ನದಿದಲ್ಲವೆನಲು
8	14	ನಲವತ್ತ	ನಲವತ್ತು
10	13	ಅರಸಿಗೆ	ಅರಸಗೆ
10	13	ನೀಂಟ	ನೀಂಟೆ
16	17	ಲಿಪಿಯನೂ	ಲಿಪಿಯನು
19	18	ಕಳುಹತ	ಕಳುಹುತ
27	21	ಬೇಗದೊಳಗರುಹುತ್ತ	ಬೇಗದೊಳರುಹುತ್ತ
28	7	ವೆನೆನುಸರಿಸೀ	ವನುಸರಿಸೀ
29	13	ಬಂದಿಹರಾಕ್ಷಸ	ಬರೆದಿಹರಾಕ್ಷಸ
31	18	ಕೇಳತಚಾರ	ಕೇಳುತಚಾರ
39	17	ಆಜ್ಞೆಯನೊ	ಆಜ್ಞೆಯನೂ
47	1	ತೆಗ್ಯೆಯಲು	ತೆಗೆಯಲು

Scanned by CamScanner

|| ಓಂ ||

ಯಕ್ಷಗಾನ

ಆಮಾತ್ಯರಾಕ್ಷಸನ ನಿರಸನ ಕಥಾ

ಶಾರ್ದೂಲ ವಿಕ್ರೀಡಿತವೃತ್ತ

ಗೋವಿಂದಂ ಗರುಡಧ್ವಜಂ ಮುರರಿಪುಂ। ಗೋಪಾಂಗನಾ ವಲ್ಲಭಂ। ದೇವೇಶಂ ಸುರಪೂಜಿತಂ ಭಯಹರಂ ಸರ್ವಾರ್ಥಸಿದ್ಧಿಪ್ರದಂ॥ ಉರ್ವೀಭಕ್ತ ಜನಾಶ್ರಯಂಚ ವರದಂಪೀತಾಂಬರಾ ಲಂಕೃತಂ। ಸರ್ವಾನಂದಪಯೋನಿಧಿಂ ಅಘಹರಂ ಶ್ರೀ ಪಾಂಡು ರಂಗಂಭಜೇ ॥೧॥

ರಾಗನಾಟಿ

ನಮಿಸುವೆನೂಗಣನಾಥ। ನಮಿಸುವೆನು ಶಿವಜಾತ। ನಮಿಪೇ ಲಂಬೋದರನೇ। ನಮಿಪೆ ಪದಗಳಿಗೇ ॥೧॥ ಆದೀಪೂಜೆಯಗೊಂಡು ಮೇಧಿಸಿಯ ಜನರುಗಳ। ಆದರಕೇ ಕೃಪೆಮಾಡು। ಹೇ ದಯಾನಿಧಿಯೇ ॥೨॥ ಕಷ್ಟಗಳ ಪರಿಹರಿಸೀ। ಇಷ್ಟಾರ್ಥವನೆಕೊಡುವ ಸ್ರೇಷ್ಟಮೂರುತಿನಿನ್ನ। ಛೀಷ್ಟವೇನ್ನೈಯ್ಯಾ ॥೩॥ ಎಳ್ಳುಂ ಡಲಿಗೆಕಬ್ಬು। ಬೆಲ್ಲಕಾಯ್ಕಡಬುಗಳ। ಒಳ್ಳೇವೋದಕಸಹಿತ। ಡೊಳ್ಳ ತುಂಬಿ ಸುವೇ ॥೪॥ ಹರಸಿನೀ ನೀಕೃತಿಗೆ। ಕರುಣಿಸ್ಯೆ ಶಭುದವನು। ಪರಿಹಾಸ್ಯಗೊಳಿಸ ದಿರು। ಶರಣುಗಣನಾಥ ॥೫॥

ಭಾಮಿನಿ

ಸರಸತಿಯ ಪಾರ್ವತಿಯ ಲಕ್ಷುಮಿಯ । ಚರಣಕಭಿವಂದಿಸುತ ಲೀಕೃತಿ । ಬರೆವೆ ಕಾಣಿಕೆಯಾಗಿ ಕಲೆಗೀಯಲ್ಕೆ ಮನವೆಳಸೀ ॥ ಗುರುವೆಕರುಣಿಸು ಶಬ್ಧಕೋಶವ। ಶರಣನಿಗೆ ಕೃಪೆಮಾಡಿಕವಿತೆಯು। ಸರಳವಾಗುವ ತೆಗದಿನೀನೊಲಿದೆನ್ನ ಜಿಹ್ವೆಯಲಿ ॥೧॥

ದ್ವಿಪದಿ

ಜನನಿಜನಕರ ಪಾದಪಂಕಜವ ಸ್ಮರಿಸೀ॥ ‌ವನಜಲೋಚನ ಕೃಷ್ಣಮೂರ್ತಿಗಭಿ ನಮಿಸೀ ॥೧॥ ಗುರುರಾಘವೇಂದ್ರ ಭಾರತಿಯರನುನೆನೆದೂ॥ ವರಕವಿಗಳೆಲ್ಲರನುಬಲ ಗೊಂಡುಮಣಿದೂ॥೨॥ ಕೃತಿಇದಕೆಪ್ರೋತ್ಸಾಹ ನೀಡಬೇಕೆಂದೂ॥ ಮತಿದಂತರಡಿ ಯೊಳಗೆ ಬೇಡ್ವೆನಾನಿಂದು ॥೩॥

Scanned by CamScanner

ವಾರ್ಧಿಕ

ಹರಿಯಣುಗನೀನಾ ತ್ರಿಕೂಟ ಪರುವತದೊಳಗೆ । ಹರಿಗೆಮಂತ್ರಿತ್ವದೊಳಗಿರುವ
ಸಮಯದೊಳ್ಬಂದ। ಹರಿಗೆಸೇವಕನಾಗಿ ಹರಿಯಲಂಘಿಸಿಪೋಗಿ ಹರಿಯರಸಿ
ಗಂಗುಲಿಯನೂ॥ ಹರಿನಿರೂಪವುಸಹಿತ ಲರ್ಪಿಸುತ ಹರಿಬದೋಳ್। ಹರಿಸು
ತನಪುರಕಟ್ಟೆ ಕರ್ಬುರಸೇನೆಯಂ। ಹರಿಭಂಟನೆನಿಸಿರ್ಪ ನಿನ್ನಡಿಯೊಳ್ಬೇಡುವೆಂ।
ಹರಿಕೆಯಂ ಕರುಣಿಸೆನುತಾ ॥೧॥

ಭಾಮಿನಿ

ಇತ್ತನೊಡ್ಡೋಲಗವ ಶಾಹುರಿ। ಪತ್ತನದೊಳಾ ಮಲಯಕೇತುವು। ಅತ್ಯಧಿಕ
ಪುರಜನರ ಅರಸರಸೇರಿಸುತಲಾಗ॥ ಹತ್ತಿರದೊಳಾ ಬಾಗುರಾಯಣ। ಅಪ್ತಸೇಖರ
ಪ್ರಮುಖರೊಡನವ। ಮತ್ತೆಪಾಟಲಿ ಪುರಕೆಮುತ್ತಿಗೆ ಹಾಕಬೇಕೆನುತಾ ॥೧॥

ರಾಗ ಕಾಂಬೋಧಿ ತ್ರಿವುಡೆ

ಈಗಲಾಮಾತ್ಯ ರಾಕ್ಷಸನು ನಮ್ಮನು ಸೇರಿ। ಸಾಗಲಿಕೆ ಸಿದ್ಧತೆಯನಡೆಸೀ॥ ತ್ಯಾಗ
ಬುದ್ಧಿಯೊಳವರು ಅಪ್ಪಣೆಯನಿತ್ತಿಹರು। ಯೋಗಫಲಿಸಿದ ಕಾಲವೆಮಗೇ ॥೧॥
ಕುಸುಮಪುರನಂನರಾ ಸೇನೆನಾಯಕರೆಲ್ಲ। ದೆಸೆಗೆಟ್ಟುನಮ್ಮ ನಾಶ್ರಯಿಸಿಹರುಈಗ ॥
ವ್ಯಸನಸಂಘಟಿಸಿಹುದು ಚಂದ್ರಗುಪ್ತನಿಗೆಂದು । ಉಸುರಿಹರು ಆಮಾತ್ಯರರಿತ
ವಿಷಯವನೂ॥೨॥ ಬಾಲವೃದ್ಧರುಶಕ್ತಿ ಹೀನರಾಗಿಹರುಳಿದು। ಪಾಳಯದ ಜೊತೆಗೆ
ಪುರಜನರೂ॥ ಕಾಲಕ್ಕೆಸರಿಯಾಗಿ ಸಿದ್ಧರಾಗಿಹುದೆಂದು। ಪೇಳಿದನು ಕಟ್ಟಾಜ್ಞೆ
ಎನುತಾ ॥೩॥ ದೇಗುಲಲಿಅಭಿಷೇಕ ಪೂಜೋತ್ಸವವನೆಡೆಸಿ। ಪೋಗಿಶಸ್ತ್ರಾಸ್ತ್ರಗಳ
ಆಗಾರದೊಳಗೇ ॥ ಈಗನಿಮಗೋಗ್ಯ ವೆನಿಸಿದ ಆಯುಧಕೆಸಾಣೆ। ತಾಗಿಸುತ ಸಜ್ಜು
ಗೊಂಡಿಹುದೂ ॥೪॥ ಭಂಡಾರದಿಂದಬಹು ಧನವತರಿಸೀಯುತ್ತ। ಕೊಂಡುಪೋಗಿರಿ
ಎಂದುಕಳುಹೀ॥ ಚಂಡವಿಕ್ರಮಿಬಾಗುರಾಯಣನ ಕೂಡುತ್ತ। ಮಂಡಲಾಧಿಪ
ಪೋದ ವಿಶ್ರಾಂತಿಗೃಹಕೆ ॥೫॥

ರಾಗ ಕೇದಾರಗೌಳ ಅಷ್ಟತಾಳ

ಬಾಗುರಾಯಣರೇನಾವ್ ನಿನ್ನೆಯದಿನದೊಳು । ಪೋಗಿಆಮಾತ್ಯರಲೀ ॥ ಆಗರು
ಹುತಲಿರ್ದ ಕರಬಕ ನ್ವಾರ್ತೆ ಚ । ನ್ನಾಗಿ ತಿಳಿದುಬಂದೆವು ॥೧॥ ಎನ್ನಯಮನಕಾಗ
ಬಂದಸಂಶಯವನ್ನು। ನಿನ್ನೊಳು ಪ್ರಶ್ನಿಸುವೆ॥ ಭಿನ್ನಭೇದಗಳಿಡ ದದನು ವಿಮರ್ಶಿಸಿ।
ಮುನ್ನಸೀ ನರುಹೆಂದನು ॥೨॥ ಎಲವೊಕುಮಾರನೆ ಯನ್ನಯಹೃದಯವ ।
ತಿಳಿದಿಹ ನೀ ನಿನಿತೂ ॥ ಸಲಿಗೆಯೊಳ್ಕೇಳೆನಾ ನುಸುರದೆ ಬಿಡುವೆನೆ । ತಿಳಿದುದ
ನಿನ್ನೊಡನೇ ॥೩॥
(ಮಲಯಕೇತು) ಚಂದ್ರಗುಪ್ತನು ಅಮಾತ್ಯನ ಗುಣಸ್ತೋತ್ರವ । ಅಂದಲ್ಲಿ ಮಾ
ಡಿರಲು ॥ ಇಂದವನಿಗೆ ಆಮಾತ್ಯನ ಪಕ್ಷವಿಹುದೆಂದು। ಸಂದೇಹವೆನಗೆಂದನೂ॥೪॥
(ಬಾಗುರಾಯಣ) ಚಂದ್ರಗುಪ್ತನು ಪೊಗಳಿದಮಾತ್ರದಿಂದಲಿ । ಇಂದು ಸಂಶಯ

ವನೀನು ॥ ಹೊಂದೆಕಾರಣವಿಲ್ಲ ಚಾಣಿಕ್ಯನಧಿಕಾರ । ದಿಂದಲಿತೆಗೆದಿರಲು ॥೫॥ ಈಗ
ಲಾತನ। ಪಕ್ಷಪಾತಿಯುರಾಕ್ಷಸ। ನಾಗಿಹುದೆನ್ನಲಿಕೇ॥ ಆಗುವುದೆನ್ನುತ ಮಲಯಕೇ
ತುವಿನೊಳು। ಬಾಗುರಾಯಣಪೇಳಲು ॥೬॥
(ಮಲಯಕೇತು) ಚಂದ್ರಗುಪ್ತನು ಎನ್ನವಶವಾದನಲ್ಲವೇ । ಚಂದನದಾಸನೀಗ ॥
ಬಂಧವಿಮೋಚನೆ ಹೊಂದುವ ಸತಿಸುತ। ರೊಂದಾಗಬಹುದೆನ್ನುತ ॥೭॥ ಶಕಟದಾ
ಸನೊಳ್ಪೇಳ್ದ ಮಾತಿಗೆ ಅರ್ಥವ । ಯುಕುತಿವಂತನೆ ಪೇಳೈಯ್ಯ ॥ ಪ್ರಕೃತಕೆ
ರಾಕ್ಷಸ ನಾಡಿದಮಾತಿನಿಂ । ವಿಕೃತಿಹೊಂದಿದೆ ಮನವೂ ॥೮॥

ವಾರ್ಧಿಕ

(ಬಾಗುರಾಯಣ) ಚಾಣಿಕ್ಯನಂತ್ಯಜಿಸಿ ದಾಚಂದ್ರಗುಪ್ತನಿಗೆ। ತಾನು ಚಾಣಿಕ್ಯನಂತ
ತಿಸಾಹಸವಗೈಯ್ಯೆ। ಮಾನವಂತನು ತಿಳಿದಭಿಜ್ಞ ನಾಗಿರಲಾತ। ತನ್ನವಶವಾಗ
ದಿಹನೇ॥ ನ್ಯೂನವಾಗದು ತನ್ನಪದವಿಗೆಂಬರ್ಥದಿಂ। ಆನಂದರಂತಿಪಂಪೂಜ್ಯಭಾವನೆ
ಇಂದ । ಸಾನುಕೂಲವ ಕಲ್ಪಿಸುವನೆಂದು ಶಕಟನೊಳ್ರಾಕ್ಷಸನುಪೇಳ್ದನೆನಲು॥೧॥

ರಾಗ ಬೇಗಡೆ ಅಷ್ಟತಾಳೆ

ಮಲಯಕೇತುವು ಬಾಗುರಾಯಣಗೇ। ಮರುಪ್ರಶ್ನೆಗೈವುತ। ತಿಳುಹುಸ್ನೇಹಿತ
ವಿಭುದವಮೌರ್ಯಜಗೇ। ಅಳಿವಬಯಸದೆ ಶಪಥಗೈಯ್ಯದೆ। ಪೊಳಲನುಳಿದು ತಪೋ
ವನಕೆಅವ । ಚಲಿಪವಿಷಯವ ಕೇಳಿರಾಕ್ಷಸ। ಫಲವಪೊಂದುವನೇನಪೇಳ್ಳೈ॥೧॥
(ಬಾಗುರಾಯಣ) ರಾಕ್ಷಸನು ಗೈದಿರುವ ಕಪಟವನೂ। ಚಾಣಿಕ್ಯಭೇದಿಸಿ ।
ಶಿಕ್ಷೆಗೈಸುತ ಲಿರ್ಪಪರಿಗಳನೂ॥ ಈಕ್ಷಿಸುತ ಬೆದರಿಹನು ವಿಬುಧನು। ಪಕ್ಷವೈಸದೆ
ಶಪಥಗೈದುವು। ಪೇಕ್ಷೆಯಿಂ ತಪೊವನಕೆಪೋದರೆ। ತಕ್ಷಣವೆಪುರಸೇರ್ವಬಯಕೆಯು
॥೨॥ ಮಲಯಕೇತುವೆ ವಿಬುಧಯಶಸ್ಸಿನೊಳೂ। ದೃಷ್ಟಿಯನೆ ಇರಿಸುತ । ಕಲಹ
ಗೈಯ್ಯದೆ ಚಂದ್ರಗುಪ್ತನೊಳೂ॥ ಬಳಿಕಮುಖವನೆ ನೋಡೆನೆನ್ನುತ ತಿಳುಹಿಪೋಗಿ
ರಬೇಕು ತನ್ನಯ। ಛಲವುನಂವರೊ ಳ್ಗೆದ್ದಿತೆನ್ನುತ। ತಿಳಿದುಕೀರ್ತಿಗೆಅಳಿವುತಾರದೆ
॥೩॥
(ಮಲಯಕೇತು) ಚಂದ್ರಗುಪ್ತನ ಪೊಗಳುತಿಹಸಖನೇ। ರಾಕ್ಷಸನುನಮ್ಮಯ
ಮುಂದೆಅಹಿತವ ತೋರುವನು ಅವನೇ॥ ಒಂದುಗೂಡಿಸಿ ಸೈನ್ಯಪೊರಡುವು। ದೆಂದು
ಪೇಳುವ ನಮ್ಮಸಮ್ಮುಖ। ದಿಂದತಪ್ಪಲು ತದ್ವಿರುದ್ಧವು। ಇಂದು ಆತನನೆಲೆಯು
ತಿಳಿಯದು ॥೪॥
(ಬಾಗುರಾಯಣ) ವಂಶಪಾರಂಪರ್ಯ ಸಚಿವರೊಳೂ। ಶ್ರೇಷ್ಟತೆಯಪೊಂದಿಪ್ರ।
ಸಂಶೆಗರ್ಹತೆ ಪೊಂದಿಮಧ್ಯದೊಳೂ ॥ ಸಂಶಯಕೆ ಎಡೆಗೊಟ್ಟುನಂದರ। ವಂಶವಳಿದಿರೆ
ಚಂದ್ರಗುಪ್ತನು । ವಂಶದವ ನೆಂದವನಪಕ್ಷದಿ। ವಂಶದುನ್ನತಿ ಗೈಯ್ಯದಿರುವನೆ ॥೫॥
ಬಾಗುರಾಯಣ ಸತ್ಯವೀನುಡಿಯೂ । ರಾಕ್ಷಸನವಿಷಯದಿ । ಹೇಗೆವರ್ತಿಸ
ಲಾತನಾದ್ಯತಿಯೂ ॥ ಬೇಗತಿಳಿಯುವು ದೆಂದುಪೇಳ್ಳೈ । ಈಗಲಾತನ ನಂಬಲರ್ಹನೆ।

Scanned by CamScanner

ಸಾಗಿನಾವ್‌ಬರುವಾಗ ಮೌರ್ಯಕ। ಗೀಗವ್ಯಸನದ ಕಾಲವಿಂದಿರೆ ॥೬॥ ತಿಳುಹು
ವ್ಯಸನವದೇನು ಎನುತವನಾ। ನಾಕೇಳಲಾತನು। ಬಳಿಕತಿಳುಹುವೆನೆಂದು ಸೈನ್ಯ
ಪನಾ।। ಕಳುಹುಪಾಟಲಿಪುರಕೆಎಂದನು। ತಿಳಿದುಬರುವೆನು ಬಾಗುರಾಯಣ। ನೆಲೆ
ಯನರಿಯದೆ ಮುಂದುವರಿದರೆ। ಬಳಿಕದುಷ್ಫಲ ಒದಗದಿಹುದೆ ॥೭॥

ರಾಗ ಕೇದಾರಗೌಳ ಝಂಪೆ

ದೊರೆಯುಬರುತಿಹುದಕಂಡೂ। ದಾಸಿಬಂ। ದರುಹಿದಳು ಅರಸಿಗಂದೂ।। ಹರುಷಗೊ
ಳ್ಳುತ ಗಂಧವಾ। ಬಟ್ಟಲನು। ಕರದಿ ಪಿಡಿಯುತದ್ವಾರದಾ ॥೧॥ ಬಳಿಯೊ
ಳಿಣುಕುತ ನಿಂದಿರೇ। ವಾರಿಪಡಿ। ದಿಳೆಯಧಿಪ ಮುಂದೆಸಾರೇ ॥ ಕಳವಳದಿ ಕಮಲಾ
ಕ್ಷಿತಾ। ಓಡ್ಯೋಡಿ। ಮಲಯಕೇತುವ ತಡೆಯುತಾ॥೨॥ ಕಾಂತನೀನೀಪರಿಯೊಳೂ
ಮನೆಮುಂದೆ। ನಿಂತಿರುವ ಎನ್ನೀಗಳೂ॥ ಇಂತುಪೇಕ್ಷಿಸಿ ಪೋಪುದೇ। ವದನದೊಳು।
ಚಿಂತೆಚಿತಿ ಯಾವರಿಸಿದೇ॥೩॥ ಕಮಲಾಕ್ಷಿ ಪೇಳಲೇನಾ। ಅರಿಬಲವ। ದಮನ
ಗೈಯ್ಯಲಿಕೆಮುನ್ನಾ।। ಶ್ರಮಿಸುವೆನು ಅಹರ್ನಿಸಿಯಲೀ। ವೈರವಾ। ಕ್ರಮಿಸಿಹುದು
ಸ್ಮೃತಿಪಟಲಲೀ ॥೪॥ ಆರಮೇಲ್ವೈರವಿಹುದೂ। ತೀರಿಸಲು। ಓರ್ವರೇ ಪೋಗುತಿ
ಹುದೂ ॥ ದೂರವಾಗದೆನೀತಿಗೇ। ಎನಗೆಅಪ। ಚಾರವಾಗುವುದು ಕಡೆಗೇ ॥೫॥

ರಾಗ ಕೇದಾರತಾಳ ಅಷ್ಟತಾಳ

ಕೋಮಲಾಂಗಿಯೆಕೇಳು ಸಾಮಂತಜನಪರು। ಅಮಾತ್ಯ ರಾಕ್ಷಸನೂ ॥
ಆಮೌರ್ಯಜಾತನ ಸೇನೆನಾಯಕರೆನ್ನ। ಕ್ಷೇಮಕ್ಕೆ ಒದಗಿಹರು ॥೧॥ ಅರಿಯಾಗಿ
ಗರುವದ ಗಿರಿಯನ್ನೆ ಅಡರಿದ। ದೊರೆಚಂದ್ರಗುಪ್ತನನೂ ॥ ತೊರೆದು ಚಾಣಕ್ಯನು।
ಪಾಟಲಿ ಪುರದಿಂದ। ಹೊರವಂಟು ಪೋಗಿಹನು ॥೨॥ ಈಗಲೆಶತ್ರುವ ದಮನವ
ಗೈಯ್ಯಲು। ಯೋಗಕೂಡಿಯೆಬಂದಿದೆ ॥ ಸಾಗಿಆಮಾತ್ಯರ ಕಾಣಲುಬೇಕೀಗ।
ನಾಗವೇಣಿಯೆ ಕೇಳೆಲೆ ॥೩॥

ರಾಗ ಸುರಟಿ ಏಕತಾಳ

ಎರೆಯನೆ ಲಾಲಿಪುದೂ। ಚಣಕಜ। ವಿರಚಿತ ತಂತ್ರವಿದೂ ॥ ತೊರೆದನು
ಮೌರ್ಯಜ ನೆಂಬೀಮಾತನು। ಮರೆಯುವ ದುಚಿತವು। ಸರುವಥನಂಬೆನು ॥೧॥
ಕೃತಸಂಕೇತದಲೀ। ಸೇನಾ। ಪತಿಗಳ ಕಳುಹುತಲೀ ॥ ಪೃಥುವಿಪನಮ್ಮಯ
ಸಿರಿಸಂಪದವನು। ಜೊತೆಗೊಳಿಸದೆ ಮೌರ್ಯಜನಿಗೆ ಪೋಗನು ॥೧॥
ತಡೆಯದಿರೆಲೆರಮಣೀ। ಯನ್ನಯ। ವಡಲುರಿಎಂಬಫಣೀ ॥ ಕಡಿದೀಡಾಡಲು
ಪೊರಟಿದೆ ಮೌರ್ಯಜ। ಮೃಢನೊಳಪೊಕ್ಕರು ಸಾಯಿಸಿಬರುವುದು ॥೩॥

ರಾಗ ಕೇದಾರಗೌಳ ಅಷ್ಟತಾಳ

ಉಳಿಸಿಕೊಂಡನೆ ನವನಂದರ ನಾಮಾತ್ಯ। ಬಲಕೆ ಬಂದಿಹ ಸೇನೆಯು ॥ ಕೊಳಗುಳ
ದೊಳಗೇನ ಗೈಯುತಲಿರ್ದರು। ತಿಳುಹಿನೀ ವೀಗೆಂದಳು ॥೧॥ ಸಮಯವ
ಕಳೆಯಲು ಬೇಡೆನ್ನ ಕಾಂತೆಯೆ। ಅಮಿತಕಾರ್ಯಗಳಿಹುದು ॥ ಕುಮತಿಚಾಣಕ್ಯನು

ಪೋಗಿಹಕಾಲದಿ। ಶ್ರಮವಿಲ್ಲ ಜಯಿಸಲಿಕೆ ॥೨॥ ಇಳೆಯೊಳು ಚಂದ್ರಗುಪ್ತನಿಗಾಪ
ಅರಿಗಳು। ಉಳಿಯದಂದದಿ ಮಾಡಲು ॥ ಛಲವ ತೊಟ್ಟಿಹನಂತೆ ಚಾಣಕ್ಯ
ಸಲ್ಲದು। ಕೊಳಗುಳ ನಿಮಗೆಂದಳು ॥೩॥ ಕಾಮಿನಿಕೇಳೆ ಆಮಾತ್ಯರು ಸಹಿತಲಿ।
ಸಾಮಂತ ಅರಸರೆಲ್ಲಾ॥ ಆಮೌರ್ಯಜಾತನ ಉಳಿಸರು ರಾಜ್ಯವು। ನೇಮದಿನಮ
ಗಹುದು ॥೪॥ ಪೃಥುವಿಆಸೆಯೊಳ್ಪೋಗಿ ಮಾಪಂದಿರಳಿದರು। ಹತವಾಯಿ
ತತಿಸೈನ್ಯವೂ ॥ ಹಿತವಂತರೆಂದು ನಂಬಿದಜನ ನಿಮ್ಮನು। ವ್ಯಥೆಗೀಡುಮಾಡುವರು
॥೫॥ ಗಂಧವಪೂಸಿ ಕುಂಕುಮವಿಟ್ಟುಫಣೆಗಾಗ। ವಂದಿಸಿ ಪಾದದೊಳು ॥ ಚಂದಿರ
ಮುಖಿಯಂದು ಬೀಳ್ಕೊಡೆಎರೆಯನ। ಮುಂದೆಸಾಗಿದ ದೊರೆಯು ॥೬॥

ರಾಗ ರಾಷ್ಟ್ರ ತ್ರಿವುಡೆ

ತೆರಳಿದನು ರಾಕ್ಷಸನಿಕೇತಕೆ। ಅರಸುಮಲಯನ ಕಂಡುರಾಕ್ಷಸ। ಬರವಿದೇನೆಂದರು
ಹಬೇಕೆನು। ತೊರೆದನಾಗ ॥೧॥
(ಮಲಯಕೇತು) ಸೈನ್ಯಸಿದ್ಧತೆಗೊಳಿಸಿ ಅಪ್ಪಣೆ। ಯನ್ನುಕಾದಿಹ ರೀಗ
ನಾಯಕ। ರಿನ್ನುತಡವೇಕೀಗ ತಮ್ಮೊಳುಅರುಹಬಂದೆ ॥೨॥ ಚಂದ್ರಗುಪ್ತಗೆ
ಆವವ್ಯಸನವು। ಬಂದಿಹುದೊನಾತಿಳಿಯಬಾರದೆ। ಇಂದು ತಮ್ಮಾರೋಗ್ಯಹೇಗಿಹು
ದೆಂದನರಸ ॥೩॥
(ಆ. ರಾಕ್ಷಸ) ಎಲೆಕುಮಾರಕಕೇಳುಆತಗೆ। ಹಲವುವ್ಯಸನವು ಅಂಟಿ ಕೊಂಡಿದೆ।
ಬಲಕೆಸೈನ್ಯಗಳಿಲ್ಲ ವಾತನ। ಬಳಿಯೊಳೀಗಾ ॥೪॥ ತೊರದಿರಲು ಚಾಣಕ್ಯನನು
ಅವ। ಗಿರದೆಮಂತ್ರಿಗಳೀಗಕಾರ್ಯವ। ನಿರುವಹಿಸಲಸಮರ್ಥ ನಾಗಿಹ ನೈಯ್ಯ
ನೆನಲು ॥೫॥
(ಮಲಯಕೇತು) ಮಂತ್ರಿವ್ಯಸನವು ಪ್ರಭುಗಳಿಗೆಬಹು। ದೆಂತುಶೂರನುದಾರ
ನಾಗಿರೆ। ಸಂತಸದಿಕರ್ತವ್ಯ ತತ್ಪರರಾಗದಿಹರೇ ॥೬॥
(ಆ-ರಾಕ್ಷಸ) ಮಿಕ್ಕಅರಸರಿ ಗ್ಹಾಗೆ ಇದ್ದರು। ಶಕ್ಯವಿಲ್ಲಾಚಂದ್ರಗುಪ್ತಗೆ।
ತಕ್ಕಸಚಿವರು ಇಲ್ಲದಿರ್ದಡೆ। ಸಾಗದೆಂದಾ ॥೭॥
(ಮಲಯಕೇತು) ಇದುವರೆಗೆ ಆಚಂದ್ರಗುಪ್ತನು। ಬುಧನೊ ಳನುರಕ್ತತೆಯ
ಪೊಂದಿರೆ। ವಿಧಿವಶದಿ ಪೋಗಿರಲಿಕಾತನು। ಅಧಿಕತರದಿ ॥೮॥ ಪ್ರಜೆಗಳೆಲ್ಲರು
ಚಂದ್ರಗುಪ್ತನ। ನಿಜಗುಣಕೆ ಮಾನ್ಯತೆಯನೀಡರೆ। ಸುಜನ ರಂಜಕ ನಲ್ಲವೇ
ಆಮೌರ್ಯಜಾತ ॥೯॥

ವಾರ್ಧಿಕೆ

(ಆ-ರಾಕ್ಷಸ) ಮಲಯಕೇತುವೆ ಪ್ರಕೃತಿ ಯೊಳಗೆರಡುತೆರನಾಗಿ। ಒಲವಿ
ಹುದು ಚಂದ್ರಗುಪ್ತನಮೇಲೆಪ್ರೀತಿಯಿಂ। ಹಲವು ಅಭ್ಯುದಕಾಗಿ ಶ್ರಮಿಸುವರು
ಚಾಣಕ್ಯಕಾಟಮಂ ಸಹಿಸದವರೂ ॥ ಬಳಿಗೆಪೋಗಲಿಕಂಜಿ ದೂರಸರಿದಿಹರೀಗ।
ಬಳಕೆಯಂಮಾಡರಾ ನಂದಾನುವರ್ತಿಗಳು। ತಿಳಿದವನುನೀನು ಆರಾತಿಗಳನಿಗ್ರಹಿಸಿ

Scanned by CamScanner

ಪ್ರಜೆಗಳಂ ಪೊರೆಯುವುದಕೆ ॥೧॥

ರಾಗ ಕೇದಾರಗೌಳ ಅಷ್ಟತಾಳ

(ಮಲಯಕೇತು) ಚಂದ್ರಗುಪ್ತನು ರಾಜ್ಯಭಾರವ ಸ್ವೇಚ್ಛೆಯಿಂ। ಮುಂದೆನಿರ್ವಹಿಸಲಿಕೆ ॥ ಇಂದುಅಶಕ್ತನೆ ಸ್ವಾಮಿ ಅಮಾತ್ಯರೆ । ಎಂದು ಕೇಳಲು ನೃಪನು ॥೧॥

(ಆ. ರಾಕ್ಷಸ) ಎಲೆಕುಮಾರಕ ಬಾಹು। ಬಲದಿಂದ ರಾಜ್ಯವ । ಘಳಿಸಿದ ಪ್ರಭುಗಳಿಗೆ ॥ ಸುಲಭವು ಚಾಣಿಕ್ಯ ಬುದ್ಧಿಯ ಬಲದಿಂದ। ಇಳೆಯನು ಪಡೆದಿರಲು ॥೨॥ ಮಂತ್ರಿಗಳಿಲ್ಲದೆ ರಾಜ್ಯವನಾಳುವ। ತಂತ್ರವ ನರಿಯನಾತ ॥ ಚಿಂತೆಯಕಡಲೊಳು ಮುಳುಗಿಹ ಮೌರ್ಯಕ । ನೆಂತುರಾಜ್ಯವ ನಾಳ್ವನೈ ॥೩॥ ಈಗ ಆಮಾತ್ಯರೆ ಶತೃವ ಜಯಿಸಲು। ಪೋಗುವ ಕಾಲವಷ್ಟೇ ॥ ಬೇಗದಿ ಅರಿಗಳ ಜಯಿಸಲು ಪಾಯವ। ಹೀಗೆಂದುತಿಳಿದಿಹಿರಾ ॥೪॥

(ಆ. ರಾಕ್ಷಸ) ಶೂರಸೇನಾಪತಿ ವೃತನಾಗಿನೀಸಿರೆ। ಮೌರ್ಯಜ ಮಂತ್ರಿಯನೂ॥ ದೂರವಮಾಡಿರೆ ನಿನ್ನವನಾಗಿನಾ। ಶೇರಿರೆಸಮಯದೊಳು ॥೫॥ ಕಾಲಕ್ಕೆಸರಿಯಾಗಿ ಮೇಲಾದುಪಾಯವ। ಪೇಳುವನಾಗಿರಲು॥ ತಾಳದೆಸಂಶಯ ವನ್ನುನೀ ಪೊರಟರೆ। ಲೀಲಾಮಾತ್ರದಿ ಜಯವು ॥೬॥

(ಮಲಯಕೇತು) ಗುರುವೆಂದುನಂಬಿ ಆಮಾತ್ಯರೆನಿಮ್ಮನು। ಹರುಷದಿ ಬೇಡುವೆನೂ॥ ಘುರಧೀರಸೇನಾ ನಾಯಕರಿಗೆಅಪ್ಪಣೆ। ಕರುಣಿಸಿ ಕಳುಹಿನೀವೆ ॥೭॥

ರಾಗ ಭೈರವಿ ತೆಂಡಕರೂಪಕತಾಳೆ

ಬಂದರಾಗ ಪಡೆಸಹಿ ತಂದುಬೇಗಾ॥ಪ॥ ಬಂದರಾ ಕೈರಾತಹೂಣರು। ಹೊಂದಿಸಿದ ಸೈನ್ಯವನೆಕೂಡುತ। ಲಂದುಅಘನಾಶನಿಯ ತೀರಗ। ಳಿಂದಶಾಹುರಿ ಪುರದವರಿಗೊಲ। ವಿಂದ ಬರುವಬ್ಬರಕೆ ಪದಹತಿ। ಇಂದಕೆಂದೂಳುಗಳು ನಭವನು। ಹೊಂದಿಭೂಮ್ಯಾಕಾಶಗಳಸ್ಥಿತಿ। ಒಂದುಗೂಡಿರ ಲಾಗರಭಸದಿ॥ ಬಂದರಾಗ॥೧॥ ಭೇರಿತಮ್ಮಟೆ ವಾದ್ಯ ಘೋಷವು। ಭೋರಿಡುವ ರಣಕಹಳೆಕೊಂಬಿನ। ಧೀರಸುಭಟರಬೊಬ್ಬೆ। ಅಶ್ವದ ಹೇರ ರವ ಕರಿಘೀಳಿನಾರ್ಭಟೆ। ದಾರುಗೆಡಿಸಲು ಕುಸುಮಪುರಜನ। ಊರತ್ಯಜಿಸುತ ವಲಸೆ ಪೋಗಲು। ಸೇರಿಸುತಸರಕುಗಳ ಬಂಡಿಗೆ। ಹೇರಲಣಿಯಾಗಿರಲು ಕಾಣುತ। ಬಂದನಾಗ ಕ್ಷಪಣಕ। ನಂದುಬೇಗಾ ॥೨॥

ರಾಗ ಕೇದಾರಗೌಳ ಅಷ್ಟತಾಳ

ಬಂದನುಕ್ಷಪಣಕ ರಾಕ್ಷಸನಿರುತಿಹ। ಮಂದಿರವನು ಹುಡುಕೀ॥ ನಿಂದಿರೆ ಆಮಾತ್ಯ ಸೇನೆಯುಪೊರಡಲು। ಚಂದದ ಲಗ್ನವನೂ ॥೧॥ ತಿಳಿಯಬೇಕೆನುತಲಿ ಚಾರನೊಳೆಂದನು। ಎಲವೊ ಶೀಘ್ರದೊಳು ಪೋಗಿ॥ ತಿಳಿದಿಹ ಜೋತಿಷ್ಯ ಕಾರರಬೇಗದಿ। ಬಳಿಗೆ ನೀ ತಹುದೆಂದನೂ ॥೨॥ ಚಾರನುಪೋಗಿ ಸಮೀಪದಿ ಹುಡುಕಲು। ಆರೂದೊರೆಯದಿರಲೂ॥ ಕೇರಿಯ ತಿರುಗಿ ಹಿಂದಿರುಗುವ ಸಮಯದಿ। ದ್ವಾರದಿ ನಿಂದಿರುವ ॥೩॥ ಜೀವಸಿದ್ಧಿಯು ಎಂಬ ಸನ್ಯಾಸಿಯನುನೋಡಿ। ತಾವೆಲ್ಲಿಂ ಬಂದಿರೆಂದು॥ ಸೇವಕ

ಕೇಳುತ್ತ ಲೊಳಪೊಕ್ಕು ಧನಿಯೊಳು ತಾವೀಗಪೇಳಿದಂತೆ ॥೪॥ ಹತ್ತಿರದೊಳಗ್ಯಾರು ಶಿಷ್ಯದೆಬರೆತವ್ಮ। ಮಿತ್ರರು ಕ್ಷಪಣಕರು॥ ಇತ್ತಬಂದಾಮಹ ದ್ವಾರದಿನಿಂದಿರೆ । ಚಿತ್ತಕ್ಕೆ ಬೆಸಗೊಂಡೆನು॥೫॥

(ಆ. ರಾಕ್ಷಸ) ಪೋಗು ಪೋಗೈಬೇಗ ವಳಯಿಕೆ ಕರೆದು ತಾ। ಯೋಗಕೂಡಿದ ಕಾಲದಿ॥ ಆಗಲೇಲಭಿಸುವು ದಲ್ಲವೆ ನೆನಸಿಹು। ದೀಗಿದ ನೋಡೆಂದನು॥೬॥ ಅರಸು ತಪೋಗಿಹ ಬಳ್ಳಿಯುಕಾಲಿಗೆ। ತ್ವರಿತದಿ ಸುತ್ತಿದಂತೆ॥ ಬರಲಾಯಿತವರೊಳು ತಿಳಿದುಸುಲಗ್ನವ। ತೆರಳುವೆ ತಾನೆಂದನೂ॥೭॥

ರಾಗ ಸೌರಾಷ್ಟ್ರ ತ್ರಿವುಡೆ

ಚಾರಕನುಕ್ಷಪಣಕನ ಒಳಯಿಕೆ। ಸಾರಿಸಲುರಾಕ್ಷಸನಮುಂಗಡೆ। ಧೀರಧರ್ಮಜ್ಞರಿಗೆ ಜಯವೆನು ತ್ಥರಸಿನಿಲಲೂ॥೧॥ಬಂದೆಯಾಕ್ಷಪಣಕನೆ ಕುಳ್ಳಿರು। ಹಿಂದಿನಿಂವಲಿ ಉಳಿದವಾತ್ರೆಯು ಇಂದುಪೊರಡಲು ವಿಜಯಯಾತ್ರೆಗೆ ಲಗ್ನವನ್ನೂ॥೨॥ ನೋಡಿ ತಿಳುಹಲು ಪೇಳೆರಾಕ್ಷಸ। ಮಾಡಿಗಣಿತವ ಜೀವಸಿದ್ಧಿಯು। ಕೂಡಿಬರುವುದು। ಮಾಧ್ಯಾಹ್ನ ಪರ ದೊಳಗೆ ಇಂದೂ॥೩॥ ಸಕಲಗುಣಯುತವಾದ ಪೂರ್ಣಿಮೆ। ಶಕುನವಾಗಿದೆ ಉತ್ತರದಿನೀ। ಸಕಲಸೈನ್ಯವಕೂಡಿ ದಕ್ಷಿಣಕೀಗಪೊರಡೇ॥೪॥ ಆಗುವದುನಕ್ಷತ್ರ ವಾಮದ। ಭಾಗಕಿದು ಬಹುಯೋಗ್ಯ ಮಪ್ಪದು। ಸಾಗಬಹುದೆನು ತೊರೆಯೆಕ್ಷಪಣಕ ನಾಗಲವಗೇ ॥೫॥ ಅನಿತರಲಿರಾಕ್ಷಸನು ಪೂರ್ವದ। ನೆನಹಿನಿಂ ಸಂಶಯದಮನಸಿಲಿ। ತನಗೆಮೊದಲಾ ವಿಜಯಯಾತ್ರೆಗೆ ಲಗ್ನವನ್ನೂ ॥೬॥ ಹೇಳಿದಂದದಿ ನೀನು ಈಗಳು। ಪೇಳದಿರು ಜ್ಯೋತಿಷ್ಯ ತಜ್ಞರ। ಕೇಳಿಯಾದರು ಏಕವಾಕ್ಯತೆ ಇಂದಪೇಳ್ಳೈ ॥೭॥

ರಾಗ ಕೇದಾರ ಗೌಳ ಅಷ್ಟತಾಳ

ಎಲವೊ ಆಮಾತ್ಯಕ ತಿಳಿವದೈವಜ್ಞರಿಂ। ಒಳಿತಪ್ಪ ಲಗ್ನವನೂ॥ ತಿಳಿದುಕೊ ಪೋಪೆಸು ಎಲ್ಲಿಗಾದರುಎಂದು। ಘಳಿಲನೆ ತಿರುಗಿದನು॥೧॥ ಏನೈಯ್ಯ ಜೀವಸಿದ್ಧಿಯೆನೀನು ಸನ್ಯಾಸಿ। ನಾನೆಂದಮಾತಿಷ್ಟಕೇ॥ ಜ್ಞಾನಶೂನ್ಯರುಮಾಳ್ಪ ಕೋಪವಗೈವುದು। ಹೀನವಲ್ಲವೆ ಧರ್ಮಕೆ ॥೨॥ ನಿನ್ನಮೇಲೇತಕೆ ನನಗಿರ್ಪುದೈಕೋಪ। ವೆನ್ನಲು ಕ್ಷಪಣಕನೂ॥ ಮಾನ್ಯನೆ ಮತ್ತಾರಿಗಿಹು ದೆನ್ನೊಳ್ಕೋಪವು। ಎನ್ನಲುರಾಕ್ಷಸನೂ॥೩॥ ಎಲವೊಆಮಾತ್ಯ ಸ್ವಾಶ್ರಿತರನ್ನು ನೀಬಿಟ್ಟು। ಬಳಿಕನ್ಯ ರೊಳುಪೊಕ್ಕಿಹ। ತಿಳಿಗೇಡಿಯಾಗಿಹ ನಿನ್ನಮೇಲಾದ್ಯೆವ। ಛಲದಿ ಆಗ್ರಹಗೊಂಡಿದೆ ॥೪॥ ಎನುತಲಾಸನ್ಯಾಸಿ ಪೋಗಲುರಾಕ್ಷಸ। ಮನದಿಚಿಂತೆಯ ತಾಳುತಾ॥ ಇನಿತೇಕೆ ಕ್ಷಪಣಕನನ್ನುನಾ ಕರೆಸಿದೆ। ನೆನುತವಿಶ್ರಾಂತಿಗೈದ ॥೫॥

ವಾರ್ಧಿಕ

ಅಮುವರೆಗೆಸಿದ್ಧಾರ್ಥ ರಾಕ್ಷಸನ ಬಳಿಯೊಳಗೆ। ಅಧಿಕ ಆಪ್ತನತೆರದಿ ನಟಸುತ್ತಹೃದ

Scanned by CamScanner

ಯಧೋಳ್। ಮೊದಲಿನಾ ಸಂಕೇತದಂತೆ ಚಾಣಿಕ್ಯರಾ ಅಪ್ಪಣೆಯಸಲ್ಲಿಸುವರೇ॥ ಇಡುವೆ ಸಮಯವುಎಂದು ಬಾಗುರಾಯಣಗರುಹ। ಲವಕನಂ ಪೇಳಿದ್ರುದ ಭಪ್ರಭಟನಿಂಗರುಪಿ। ತದನಂತರದಿ ಶಕಟದಾಸನಾ ಗೃಹಕ್ಕೈದಿಒರೆದನತಿ ನಮ್ರತೆಯೊಳಹ॥೧॥

ರಾಗ ಕೇದಾರಗೌಳ ಅಷ್ಟತಾಳ

ಅನತಿದೂರದೊಳೆನ್ನ ಶ್ವಶ್ರುಗೃಹವುಇರ್ಪು। ದಿನಿತುನಾ ಪುರದಿಂದಲಿ॥ ಜನರಿಗೆತಿಳಿಯದಂದದಿ ಬರಲೆನ್ನಯ। ವನಿತೆಯು ಇರಲಂಜುತ್ತಾ॥೧॥ ಅಲ್ಲಿಂದಜನಕನ ಮನೆಗೆ ಬಂದಿಹಳಂತೆ। ಎಲ್ಲಾರ ನೋಡಿನಾನು॥ ಇಲ್ಲಿಆಮಾತ್ಯರ ಪ್ರೀತಿಗೆಪಾತ್ರನೆಂ। ದೊಲ್ಲಭೆಯೊಳಗರುಹಿ॥೨॥ ನನಗೆಆಮಾತ್ಯರು ಕೊಟ್ಟಿಹ ಭೂಷಣ। ವನುಕೊಟ್ಟು ಸಂತಯಿಸೀ॥ ದಿನಮಣಿಮೂಡುವ ಮೊದಲೇನಾ ಬರುವೆನು। ಸನುಮತವೇಎನಲೂ ॥೩॥

(ಶಕಟದಾಸ) ವದ್ಯಸ್ಥಾನಕೆವೈದ ಎನ್ನನು ತಪ್ಪಿಸಿ। ವೈದ್ಯರೆ ಸಲಹಿದಿರೀ॥ ಸಿದ್ಧಾರ್ಥನೆನ್ನುವ ನಾಮಸಾರ್ಥಕವಾಯ್ತು। ಬುದ್ಧಿವಂತರೆ ಪೋಗಿರಿ॥೪॥ ಈಗಲೇಕೊಡುವೆನು ಆಮಾತ್ಯರಿತ್ತಿಹ। ಯೋಗ್ಯ ಭೂಷಣವನೆಂದು॥ ಆಗರುವನುಕೊಡ। ಲಲ್ಲಿಂದ ತೆರಳಿದ। ಬೇಗದಿಸಿದ್ಧಾರ್ಥಕನು ॥೫॥

ವಾರ್ಧಿಕ

ಮೊದಲುಚಾಣಿಕ್ಯ ರಿತ್ತಿರುವ ಲೇಖಿಯ ಕಟಿಯೊಳ್। ಹುದುಗಿಸುತ ತನ್ನಕಿವಿಯೊಳಗವರು ಉಸುರಿರ್ದ। ವಿಧಿಯನನು ಸರಿಸುತೆಲ್ಲವನೆನೆದು ಬರುತಿರ್ದ। ನುಕ್ಕಡಪ ಮಾರ್ಗದೊಳಗೇ॥ ಇದಕೆಪೂರ್ವದಿ ಬಾಗುರಾಯಣಗೆ ಸಿದ್ಧಾರ್ಥ। ಹದನಮಂ ನರುಹಿದಂದದಿ ಮಲಯಕೇತುವಿನ। ಹೃದಯಕೊಪ್ಪುವತೆರದಿ ಬೋಧಿಸುತದಂಡೆತ್ತಿ। ಪೋಗುವೀ ಸಮಯದೊಳಗೆ॥೧॥

ರಾಗ ಬೇಗಡೆ ಅಷ್ಟತಾಳ

(ಬಾಗುರಾಯಣ) ಉಕ್ಕಡದಿ ಬಾಲಕನಕಾದಿನದೀ। ನಾನಿರುತ ಉಂಡಿಗೆ। ತಕ್ಕಜನರಿಗೆ ಕೊಡುತಎಚ್ಚರದೀ॥ ಕಿಕ್ಕಿರಿದು ಬರುತಿರ್ಪ ಸೇನೆಯೋಳ್ಳ ಕ್ಕರಾಗಿಹ ಬೇರೆಸ್ಥಳದವ। ರ್ಲ್ಗ ಕನ್ನನುಸುಳದ ತೆರದಿನೋಡುವೆ। ಇಕ್ಕೆಲದಿನೀನಿರಿಸುದೃಷ್ಟಿಯ ॥೧॥ ಎನುತ ಪೋಗುತ ಬಾಗುರಾಯಣನೂ। ಉಂಡಿಗೆಯಕೊಡುತಿರೆ। ಅನಿತರಲಿ ಸಿದ್ಧಾರ್ಥಪೋಪುದನೂ॥ ಇಣಕುತಾ ಕ್ಷಪಣಕನು ಬರುತಿರೇ। ತನಗೆಅಪಶಕುನಗಳಿದಾದರು। ಸನಿಹಸಾರಿದ ಜೀವಸಿದ್ಧಿಯೊ। ಳೆನಿತುವಾರ್ತೆಗ ಳಿಹ್ಪುದ್ಲೊತಿಳಿವೆನು॥೨॥ ಎಂದುಸಿದ್ಧಾರ್ಥಕನು ಯೋಚಿಸುತಾ। ಕ್ಷಪಣಕರೆತಾವೆ। ಲ್ಲಿಂದಬಂದಿರಿ ಪಯಣದಡೆಎತ್ತಾ॥ ತಂದವಾರ್ತೆಗ ಳೇನೆಇದ್ದರು। ಹಿಂದುಮುಂದಕೆ ದೃಷ್ಟಿಹರಿಸುತ। ಹೊಂದಿಕೆಯಪದ ದೊಳಗೆಆಡುವು। ದೆಂದುನಮಿಸಿದ ನಾತನಡಿಯೊಳು॥೩॥ ಎಲವೊಸಿದ್ಧಾರ್ಥಕನೆ ನೀನೀಗ। ಎಜಮಾನರಪ್ಪಣೆ। ಕೊಳುತಬಂದಂತಿಹುದು ನಿನಗೀಗ॥ ಫಳಿತೆಎನುತಿರೆ ತಾವು

ಜ್ಯೋತಿಷ। ತಿಳಿದವರು ಸಟೆಯಪ್ಪುದೇನೈ। ಬಳಲಿಬಂದಿರುವಂತೆ ಮುಖದೊಳು। ಕಳೆಯುಗುಂದಿಹು ದೇಕೆಪೇಳೈ ॥೪॥

ರಾಗ ಕೇದಾರಗೌಳ ಅಷ್ಟತಾಳ

(ಕ್ಷಪಣಕ) ನಾನು ಪೇಳುವುದೇನು ನಿನ್ನೊಳಗಿಹಪತ್ರ। ತಾನೆಸೂಚಿಪುದೆನ್ನುತಾ॥ ನಾನೇಕೆ ಬಳಲಲಿ ಸಿದ್ಧಾರ್ಥ ನೆಮ್ಮದಿ। ಕಾಲವುತನಗೆಂದನು ॥೧॥

(ಸಿದ್ಧಾರ್ಥ) ಮತ್ತೊಂದುದೇಶಕೆ ತೆರಳಬೇಕಾಗಿದೆ। ಉತ್ತಮಘಳಿಗೆಯನೂ॥ ಚಿತ್ತದಿಶೋಧಿಸು ತಿತ್ತರಪ್ಪಣೆಕೃತ। ಕೃತ್ಯನು ತಾನೆಂದನು ॥೨॥ ಎಲವೊ ಸಿದ್ಧಾರ್ಥನೆ। ಪಪನವಮಾಡಿಸಿ। ಬಳಿಕ ಆಯುಷ್ಕರ್ಮಕೆ॥ ಒಳಿತಾದದಿನವನ್ನು ಕೇಳಿದತೆರನಾಯ್ತು। ತಿಳಿಯದೆ ನಿನಗೆಂದನು॥೩॥ ಇರಲಿ ಆಮಾತೀಗ ಜೀವಸಿದ್ಧಿಯೆ ತಮ್ಮ। ಬರವೆಲ್ಲಿಂದಾಯಿತೈಯ್ಯಾ॥ ತೆಗಳುವದೆಲ್ಲಿಗೆ ಹೆಚ್ಚುವಿಶೇಷವೇ। ನಿರುವುದುಪೇಳಿರೆಂದ ॥೪॥

(ಕ್ಷಪಣಕ) ಈಗಇಲ್ಲಿಂದ ಪಾಟಲಿಪುರ ಮಾರ್ಗದಿ। ಪೋಗುವ ಜನರೆಲ್ಲರೂ॥ ಬಾಗುರಾಯಣರೀವ ಉಂಡಿಗೆಕೊಳ್ಳದೆ। ಪೋಗೆಲುಕ್ಕಡದೊಳಗೇ॥೫॥ ಬಿಡರಂತೆಉಂಡಿಗೆ ತೋರಿಸಿದಲ್ಲದೆ। ಪೊಡವಿಪ ನಾಜ್ಞೆಯಂತೇ॥ ಕಡುಗಲಿ ಭಟರಿಹ ರಂತೆರಾತ್ರಿಯೊಳ್ಪೋಗೆ। ತಡೆದುಬಂಧಿಸುವರಂತೆ ॥೬॥

ವಾರ್ಧಿಕ

ಕೇಳೆಲೈಸಿದ್ಧಾರ್ಥ ನಿಶಿಯವೇಳೆಯೊಳ್ಪೋಗೆ। ಹಾಳಾದಉಕ್ಕಡದ ಜನರಕೈಸೆರೆಸಿಕ್ಕಿ। ಕೀಳಾದಬಂಧನಕೆ ಗುರಿಯಾಗಿ ಆತಸನಾ। ಮುಂದೆನಿಲ ಬೇಕಾದರೇ॥ ಕೇಳದೇ ಉಂಡಿಗೆಯ ಪೋಗುನೀರಾಕ್ಷಸನ। ಪಾಳಯದಹರಿಕಾರ ನೆಂದುಬಿಟ್ಟರುಬಿಡಲಿ। ಮೇಲಾಗಿನಿನ್ನ ಕಾರ್ಯವು ಸಿದ್ಧಿಸುವಸಮಯ। ಸನ್ನಿಹಿತ ವಾಗಿರ್ಪುದೂ ॥೧॥

ರಾಗ ಸೌರಾಷ್ಟ್ರತ್ರಿವುಡೆ

ಬಾಗುರಾಯಣ ನೊಡನೆ ಉಂಡಿಗೆ। ಗಾಗಿಪೋಗುವೆ ನೆನ್ನದೇಶಕೆ। ಸಾಗುವೆನುಎನುತೊರೆದುಕ್ಷಪಣಕ। ಪೋಗಲಾಗ ॥೧॥ ಅನಿತರೊಳಗಾ ಬಾಗುರಾಯಣ। ಮನದಿ ಚಾಣಿಕ್ಯರನು ನೆನೆಯುತ। ಗುಣಮಹಿಮ ರವರೀಗಗೈದಿಹ ಕೃತಿಯನೋಡೆ॥೨॥ ಕಾಲವಲ್ಲದ ಮೇಘದಂತೆಯು। ಮೇಲೆದೈವವಿಲಾಸ ದಂತೆಯು। ಸ್ಥೂಲಫಲವನು ತೋರಿಮರುಕ್ಷಣ ದೊಳಗೆಅಡಗೀ॥೩॥ ಪುನಹತೋರಿಸಿ ಅಡಗಿಮೂಲವು। ಕನಸಿನೊಳಗಾಪಡೆಯು ತಿಳಿಯದ। ಇನಿತುಕಾರ್ಯವ ಗೈವರ್ಯಾರೆಂದರಿಯೆನೀಗ ॥೪॥ ಮಲಯಕೇತುವಿ ನೆಲ್ಲಸೇನೆಯು। ಕೊಳುಗುಳಕೆ ಅಣಿಯಾಗಿ ರಾಕ್ಷಸ। ತಿಳುಹಿದಂದದಿ ಕುಸುಮಪುರವನು ಮುತ್ತಲೆಳಸೀ ॥೫॥ ಪೊರಟಿಹುದು ಈಸಮಯದೊಳುನಾ। ಆರಘುಮಗ ಸ್ವಾತ್ತಿರದೊಳಿಲ್ಲದೆ। ತೆರಳಿದರೆ ಆತನಿಗೆಸಂಶಯ। ಬರದೆಇಹುದೇ॥೬॥

ಇದಕುಪಾಯವ ಮಾಳ್ಪೆನೆನ್ನುತ। ಬದಿಯೊಳಿಹ ಚಾರಕನ ಕರೆಯುತ। ಇದುಮೊ
ದಲು ಉಂಡಿಗೆಯ ಕೇಳಲು ಬರುವಜನರಾ॥೭॥ ಚಾವಡಿಯ ಹತ್ತಿರಕೆ ಕಳುಹಲು।
ಈವೆನಾ ನುಂಡಿಗೆಯ ನೆನ್ನುತ। ಸೇವಕನಿಗಾಜ್ಞೆಯನು ಗೈದಲ್ಲಿಂದಪೊರಟಾ ॥೮॥

ವಾರ್ಧಿಕ

ಇತ್ತಅರಮನೆಯೊಳಗೆ ಪರುವತಾಖ್ಯನಪುತ್ರ। ಮತ್ತಾತನಾ ಮನದಿಯೋಚಿಸಿದ
ಮಮುಸೈನ್ಯ। ಮುತ್ತಿಗೆಯನಿತ್ತರಾ ಪಾಟಲೀಪುರದೊಳಗೆ। ಪತ್ನಿಪುತ್ರರುಶಿಲುಕಿರೇ॥
ಉತ್ತುಮದ ನಂದವಂಶೋತ್ಪನ್ನ ನಾ ಚಂದ್ರ। ಗುಪ್ತನೆಂಬಭಿಮಾನ ದಿಂದಲಾರಾಕ್ಷ
ಸನು। ಮತ್ತಲ್ಲಿನೆಲಸಲಿಕೆ ಸಂಧಿಯಂಮಾಳ್ಪನೋ। ನುಡಿದಂತೆ ನೆಡೆಸುತಿಹನೋ।೧॥

ರಾಗ ಕೇದಾರಗೌಳ ಅಷ್ಟತಾಳ

ಈಗಲೀಝುಟಿಲ ಸಮಸ್ಯೆಗೆ ಪರಿಹಾರ। ಬಾಗುರಾಯಣ ನಲ್ಲದೇ। ಆಗದು ತನಗೆಂದು
ನೃಪಸುತ ನ್ಯೋಚಿಸು। ತಾಗಕಂಚುಕಿಗೆಂದನು॥೧॥ ಹೊರಗಡೆನೋಡಿಬಾ ಬಾಗು
ರಾಯಣರೆಲ್ಲಿ। ಇರುವರೆಂಬುದನುನೀನು॥ ಪುರದಿಂದ ಪೊರಡುವ ಜನರಿಗೆಉಂಡಿಗೆ।
ಕರುಣಿಸೆ ಪೋಗಿಹರೂ ॥೨॥ ಅಪ್ಪಣೆಯಂತಾಗ ಕಂಚುಕಿಪೊರಡಲು। ಒಪ್ಪದ ಅರ
ಮನೆಯ॥ ಚಪ್ಪರಚಾವಡಿ ಯೊಳಗೆ ಮಾತಾಡುವ। ಸಪ್ಪಳಕೇಳಿಸಲು॥೩॥ ಅನಿತ
ರೊಳ್ ಜೀವಸಿದ್ಧಿಯು ಬಾಗುರಾಯಣ। ರೆನುವರ್ಯಾರೆಂದುಕೇಳಿ॥ ಸನಿಹಕೆಬರ
ಲಾಗಿ ಹೊರಗಿಹಚಾರಕ। ಧನಿವಿಡೆಗೈತರೆಲು ॥೪॥ ಹರಸಿದನಾ ಜೀವಸಿದ್ಧಿಯು
ಧರ್ಮಿಷ್ಠ ರಿರುವೆಡೆಜಯವಾಗಲೀ॥ ಪರುವತೇಶನ ಪುತ್ರನಿಂಗೆ ಮಂಗಳವಾಗಿ। ಹರು
ಷಾದಿಇರಲೆನ್ನುತಾ ॥೫॥ ಬಾಗುರಾಯಣನಾಗ ಬನ್ನಿರಿನಮನವು ಸ್ವಾಗತ ಕ್ಷಪಣ
ಕರೇ॥ ಈಗಎಲ್ಲಿಂದ ಬಂದಿರಿಕುಶಲವೆನೀವು। ಹೀಗೆಕುಳ್ಳಿರಿಎಂದನು॥೬॥ ಕಾರ್ಯ
ದುರಂಧರ ರಾಗಿಹತವಕ್ಷೇಮ। ಶೌರ್ಯಸಾಹಸದಿಂದಲೀ॥ ಈರ್ವೆವ್ವೈಕುಶಲದಿ ಎಂದು
ಪೇಳುತಲಿರೆ। ಉರ್ವೀಪತಿಯಚಾರನು ॥೭॥

ರಾಗ ಕೇದಾರಗೌಳ ಝಂಪೆ

ಚಾವಡಿಯು ಕಡೆಗೆನೋಡಿ। ಸುಮ್ಮನೇ। ಸೇವಕನು ಪಿಂದೆಪೋಡಿ॥ ದೇವರೇ ಹೊರ
ಗಡೆಯಲೀ। ಕುಳಿತುಳ। ಜೀವಸಿದ್ಧಿಯ ಬಳಿಯಲೀ ॥೧॥ ಪಿಸುಮಾತ ನಾಡುತಿಹ
ರೂ। ನೋಡಿನಾ। ಉಸುರಬಂದೆನು। ಈರ್ವರೂ॥ ಕುಶಲವನು ಬೆಸಗೊಳುತಿರೇ।
ಮಧ್ಯದೊಳು। ಹುಸಿನಗೆಯ ಹಾಸೊಕ್ಕಿರೇ ॥೨॥ ಅರಸನಾಕ್ಷಣದೊಳೆದ್ದು। ಚಾವ
ಡಿಯ। ಪರದೆಹಿಂಬದಿಯೊಳಿದ್ದು। ಎರಡುಜನ ರೀವೊದಲಿಗೇ। ರಾಕ್ಷಸನ। ಪರಮ
ಸ್ನೇಹಿತರುಹೀಗೆ ॥೩॥ ಕುಳಿತೇನ ಯೋಚಿಸುವರೂ। ಅರಿಯುವೆನು। ಬಳಿಸಾರ್ದ
ರೀಗಲವರೂ॥ ತಿಳಿಯಬಾರದುಪರರಿಗೇ। ಎನುತವರು। ಹೊರ್ಕಳಿಸಲು ಬಹುದು
ಕಡೆಗೇ॥೪॥ ಅರಸಯೋಚಿಸಿಬರುತಿರೇ। ಪಂಜರದಶುಕ। ದೊರೆಪರಾಕೆನುತಲುಸುರೇ॥

ಹೊರಗೆಕೇಳಿಸಲಿವರಿಗೇ। ಕ್ಷಪಣಕನೊ। ಳೊರೆದನಾಕ್ಷಣದಿ ಹೀಗೆ ॥೫॥ ಬಂದ
ಕಾರ್ಯವ ನುಸುರದೇ। ಸುಮ್ಮನೇ। ನಿಂದಿರೇತಕೊ ಕಾಣದೇ॥ ಸಂದುದೈಬಹುದಿ
ವಸವೂ। ದರ್ಶನವು। ಇಂದಾದುದೇ ಸುಕೃತವೂ ॥೬॥

ರಾಗ ಕೇದಾರತಾಳ ಅಷ್ಟತಾಳ

ಬಾಗುರಾಯಣನಾನು ಉಂಡಿಗೆಪಡೆಯಲು। ಸಾಗಿಬಂದೆನು ಇಲ್ಲಿಗೇ॥ ಈಗಲಾಉಕ್ಕು
ಡ ದೊಳಗೆತೋರಿಸದಿರೆ। ಪೋಗಲಿಕಾಗದಂತೆ ॥೧॥
(ಬಾಗುರಾಯಣ) ಈಗರಾಕ್ಷಸನ ಕಾರ್ಯಾರ್ಥದಿಪೋಗಲು। ಸಾಗಿಬಂದಿಲ್ಲವಷ್ಟೇ॥
ಹೀಗೇಕೆತ್ವರಿತವು ಕುಳಿತುಕೊಳ್ಳಿರಿ ಎಂದು। ಬಾಗುರಾಯಣ ಪೇಳಲು ॥೨॥
(ಕ್ಷಪಣಕ) ವಂಚಕನಾಗಿಹರಾಕ್ಷಸನಾ ನಾಮ। ಕಿಂಚಿತ್ತುಕೇಳಲಾರೆ॥ ಮುಂಚೆ
ನಾನರಿಯದೆ ಗುಂಡಿಗೆ ಬಿದ್ದೆನು। ಚಿಂತಿಸಿಫಲವಿಲ್ಲೆಂದ ॥೩॥ ದುರುಳನ ಪೆಸರೆಲ್ಲಿ
ಇಲ್ಲದೆಇರುವುದೊ। ಅರಿತುನಾನಲ್ಲಿಗೀಗ॥ ತೆರಳಬೇಕಾಗಿದೆ ಉಂಡಿಗೆಕೊಡು ಎಂದು
ಅರುಹಲು ಕ್ಷಪಣಕನೂ ॥೪॥
(ಬಾಗುರಾಯಣ) ಏನೈಯ್ಯ ಜೀವಸಿದ್ಧಿಯೆ ನಿನ್ನಮಿತ್ರನೊ। ಳೇನಪರಾಧವನೂ॥
ನೀನುಕಂಡೀಪರಿ ತೆಗಳುವೆ ನಿನಗಂಥ। ಹಾನಿಯಾಗಿಹುದೇನೆಂದಾ ॥೫॥
(ಕ್ಷಪಣಕ) ಆತನಿಂದೇನಿದೆ ದೋಷವುನಾನಾಗಿ। ಆತನಸಹವಾಸಕೆ॥ ಪ್ರೀತಿಯಿಂ
ಪೋದುದ ಕಾಯಿತು ಶಾಸ್ತಿಯು। ಘಾತುಕ ನಿಹನವನೂ ॥೬॥

ರಾಗ ಶಂಕರಾಭರಣ ಅಷ್ಟತಾಳ

ಏನುಘಾತುಕ ತನವಮಾಡಿದನೂ। ಕ್ಷಪಣಕನೆ ಯನ್ನೊಳು। ನೀನುಪೇಳಲಿ ಕಾ
ಗದೇ ಅದನೂ॥ ಮಾನವಂತನು ರಾಕ್ಷಸನುಏನು। ತಾನುತಿಳಿದಿಹೆ ಈಗಲವನೊಳು
ಹೀನವೃತ್ತಿಯು ಇಹುದುಎನುತನು। ಮಾನಗೈಯ್ಯುವ ತೆರದೊಳಾಯಿತು ॥೧॥
ಬಾಗುರಾಯಣ ಲಜ್ಜೆಯಾಗುವುದೂ। ಹೇಳಲಿಕೆ ಕೃತ್ರಿಮ। ವೀಗಪೇಳಲು ಕ್ರೂರ
ಕೃತ್ಯವದೂ॥ ಹೇಗೆಪೇಳಲಿ ರಾಕ್ಷಸನುಯನ। ಗಾಗಸೂಚಿಸಿ ದಂತೆನೆಡೆಸಿದೆ। ಈಗಲ
ವನರುಹಿರುವಕಾರ್ಯವ। ಸಾಗಿಸಲಿ ಕೊಪ್ಪದೆಯೆ ಪೊರಟಿಹೆ ॥೨॥
(ಬಾಗುರಾಯಣ) ಪೇಳದಿಹ ಗುಟ್ಟೇರಲು। ಎನ್ನೊಡನೇ। ಉಂಡಿಗೆಯ ಪಡೆಯಲು।
ಕಾಲವಲ್ಲವು ತೆರಳುನಿನ್ನೊಡನೇ॥ ಹಾಳುಹರಟೆಯ ಮಾತನಾಡಲು। ವೇಳೆಇಲ್ಲವು
ಎನಗೆಪೋಗೈ। ಜಾಲವೆಲ್ಲವಬಲ್ಲೆ ರಾಕ್ಷಸ। ನೂಳಿಗದಿ ಬದುಕಿಹುದ ನರಿತಿಹೆ ॥೩॥
(ಕ್ಷಪಣಕ) ನೀನುಕೇಳೆ ಕುತೂಹಲದೊಳಿರಲೂ। ಪೇಳುವೆನುಕೇಳೈ। ನಾನು
ಪಾಟಲಿಪುರದೊಳುಳಿದಿರಲೂ॥ ಆನರಾಧಮ ನಾದರಾಕ್ಷಸ। ಹೀನವಿಷಕನ್ಯೆಯನು
ಸಾಕಿರೆ। ಮಾನನಿಧಿ ಪರುವತನು ನಂದರ। ಹಾನಿಗೈಸಿದ ನೆಂಬದ್ವೇಷದಿ ॥೪॥ ಎನ್ನ
ಸಂಗಡಕಳುಹಿ ಆಕೆಯನೂ। ಪರುವತನ ಕೊಲಿಸಲು। ಮೊನ್ನೆ ಆಚಾಣಕ್ಯ ತಿಳಿದ
ವನೂ॥ ಎನ್ನ ಅಪಮಾನವನೆ ಗೈಸುತ। ಲಿನ್ನುಪಾಟಲಿಪುರಕೆ ಬರದಿರ। ಲೆನ್ನುತ್ತೊ

ರಗಟ್ಟೆಸಲು ಬಂದೆನು। ನಿನ್ನೆಇಲ್ಲಿಯು ನೋಡಿಹೇಸಿದೆ ॥೫॥ ಅರಸರಿಗೆ ಬೋಧಿಸುತ ತನ್ನೊಳಗೇ। ಆ ಚಂದ್ರಗುಪ್ತನ। ಪರಮಮಿತ್ರನ ಮಾಡಿಕೊಳುತವಗೇ॥ ಹಿರಿಯಮಂತ್ರಿತ್ವದೊಳು ಉಳಿಯಲು। ಉರುತರದ ಸಾಹಸದೊಳಿರ್ಪುದ। ನರಿತುಮನ್ನಹೇಸಿರಲು ದೇಶವ। ತೊರೆಯೆ ಉಂಡಿಗೆ ಬಯಸಿಬಂದೆನು ॥೬॥

(ಬಾಗುರಾಯಣ) ಪರುವತೇಶನಿ ಗರ್ಧರಾಜ್ಯವನೂ। ಕೊಡಬಾರದೆನ್ನುತ। ಹಾರ್ವಚಾಣಿಕ್ಯಕನು ಲೋಭವನೂ॥ ನಿರ್ವಹಿಸಿ ಕೊಲ್ಲಿಸಿದನೆನ್ನುತ। ಸರ್ವಜನ ರರಿತಿಹುದಸಟಿಯಾ। ಯುತ್ತುರ್ವಿಪತಿ ವಿಷಕನ್ಯೆಎಂಬುದ। ನರಿಯದೆ ಕೂಡುತ್ತಮಡಿದನೆ॥೭॥

ರಾಗ ಕೇದಾರಗೌಳ ಅಷ್ಟತಾಳ

(ಕ್ಷಪಣಕ) ಅರಿಯನಾಚಾಣಿಕ್ಯ ನಿವನೊಂದನಾತನು। ಅರುಹಲೇ ಸಟಿಯ ನಾನು॥ ದುರಿತವ ಕಟ್ಟಿಕೊಳ್ಳಲಿ ಕಾಗದೆನ್ನುತ। ಲೊರೆದದು ಕ್ಷಪಣಕನು ॥೧॥ ಹಾಗಾದರೀಅರ್ಥ ವಸುರಾಜಪುತ್ರನಿ। ಗೀಗನೀನರುಹಲಿಕೆ॥ ಆಗದೇಎನ್ನುತ ಕ್ಷಪಣಕನೊಡನಾಗ। ಬಾಗುರಾಯಣ ಕೇಳಲು ॥೨॥ ಹಿಂದೆ ಮಿತ್ರತ್ವದೊಳಿರ್ದುರಾಕ್ಷಸನೊಳು। ಇಂದುಶತ್ರುತ್ವವನೂ॥ ಹೊಂದಿಸಿಆಡುವ ದುಚಿತವೆಪೇಳಿರಿ। ಎಂದನು ಕ್ಷಪಣಕನು ॥೩॥ ತೆರೆಮರೆಯೊಳಗಿಹ ಮಲಯಕೇತುವಿಗೆಲ್ಲ। ಅರಿವಾಯ್ತು ಪಿತೃವನಾಗ॥ ಸ್ಮರಿಸುತ ದುಃಖವ ತಡೆಯಲಿಕಾಗದೆ। ಹೊರಬಂದು ರಾಕ್ಷಸನಾ॥೪॥ ಮೇಲೆ ಬಂದಿಹಕೋಪ ವನುಸೂಚಿಸುತ್ತಲಿ। ಕೇಳೈಯ್ಯ ಮಿತ್ರನೀನು॥ ಶೀಲವಂತನು ಈತ ಸನ್ಯಾಸಿಸತ್ಯವ। ಪೇಳಿದಮಾತಿನಿಂದ ॥೫॥ ಮರೆತಿಹಪಿತೃಕ್ಲೇಶ ದ್ವಿಗುಣ ಗೊಂಡಿಹುದೈಯ್ಯ। ತರಹರಿಪುದುಕಾಯವು॥ ಹರಹರರಾಕ್ಷಸ ನೆಂಥಕೃತ್ಯವಗೈದು। ತೊರಸಿದನೈಪಿತನಾ ॥೬॥ ಆಗಲಾಕ್ಷಪಣಕ ತನ್ನೊಳಗ್ಯೋಚಿಸಿ। ಸಾಗಿತೆನ್ನಯ ಕಾರ್ಯವು॥ ಈಗಳೀಅರಸಗೆ ನಾನೇಪೇಳುವುದುತಾ। ನಾಗಿಯೆ ತಿಳಿಯಿತಲ್ಲ ॥೭॥ ಈಗನಾಕೃತಕೃತ್ಯ ನೆನುತಲೆಮರೆಯಾಗಿ॥ ಸಾಗಿದಕ್ಷಪಣಕನು॥ ಬಾಗುರಾಯಣನಾಗ ಮಲಯಕೇತುವಿನೊಳು। ಪೋಗುಬಾಲಕ ವಳಗೇ ॥೮॥ ಆಗದುನಾವಿಲ್ಲಿ ಮಾತನಾಡುವುದೀಗ। ಸಾಗಿಬರುವೆನಲ್ಲಿಗೇ॥ ಈಗನೀಕೋಪಿಸೆ ಕೂಡಿಬರುವುದೇನು। ಯೋಗವೆಂತಿಹುದೊಮುಂದೆ ॥೯॥

ವಾರ್ಧಿಕ

ಕಳುಹುತರಸನ ಬಾಗುರಾಯಣನು ತನ್ನೊಳಗೆ। ತಿಳಿದ ನೀ ಸಮಯದೊಳು ರಾಕ್ಷಸನ ಜೀವಸಹಿ। ತುಳಿಸದಿರೆ ಚಾಣಿಕ್ಯರೆನಗಿತ್ತ ಅಪ್ಪಣೆಯ ಮೀರಿನಡೆದಂತಾಗದೇ॥ ಮಲಯಕೇತುವಿಗಿನ್ನು ಕೋಪವನ್ನೆಚ್ಚಿಸಲು। ಹಲವುಕಾರಣವಿಹುದು ಸಾಧಿಸುತಲಿಲ್ಲಿಂದ। ಘಳಿಲನಾಮಾತ್ಯನಂ ಹೊರದೂಡುವಂತೆನಾಂ ಮಾಳ್ಪೆನೆನ್ನುತಪೋಗಲೂ ॥೧॥

ರಾಗ ಬೇಗಡೆ ಅಷ್ಟತಾಳ

ದೊರೆಕುಮಾರಕ ಕೇಳುಕೋಪವನೂ। ವಿಮರ್ಶೆಇಲ್ಲದೆ। ಚರಿಸಬಾರದು ಪಿಂದೆರಾಕ್ಷಸನೂ॥ ಅರಸರಾಗಿಹ ನಂದರಳಿದಿರೆ। ದೊರೆಗೆ ಸ್ವೀಕೃತ ಪುತ್ರನೆನುತಾ। ವಿರಚಿಸುತ ವಂಶವನೆ ಉಳಿಸಲು। ಪರುವತಗೆ ಮೇಣ್ ಚಂದ್ರಗುಪ್ತಗೆ ॥೧॥ ವೈರಭಾವನೆ ಇಂದಗೈದಿರುವಾ। ಕಾರ್ಯವನೆ ಎಣಿಸುತ। ವೈರಿಎನ್ನುತ ಭಾವಿಸದೆ ಇರುವಾ॥ ಕಾರಣಗಳಿಹುದೈಯ್ಯ ವೃದ್ಧರು। ತೀರಿರಲಿಕಾ ಮೌರ್ಯಕನಸಂ। ಹಾರಕಾರ್ಯದಿ ತೊಡಗಿನ್ನಲಿ। ಸೇರಿರಲು ದೋಷಗಳಿದಲ್ಲವು ॥೨॥ ನಿನ್ನಮುಖದಿಂ ಚಂದ್ರಗುಪ್ತನನೂ। ಕೊಲ್ಲಿಸುತ ರಾಜ್ಯವ। ನನ್ನಿಇಂ ನಿನಗಿತ್ತುಪಟ್ಟವನೂ॥ ತನ್ನಪೂರ್ವದ ಮಿತ್ರನಾಸುತ। ನೆನ್ನುತಲಿ ರಾಕ್ಷಸನು ಯೋಚಿಸಿ। ಉನ್ನತದ ಕಾರ್ಯವನೆ ಗೈಯ್ಯಲು। ಸನ್ನಹವ ನೆಸಗಿರ್ದನಾದಡೆ ॥೩॥ ಈಗಆತನಮೇಲೆ ಕೋಪವನೂ। ಗೈಯ್ಯುವುದು ಅನುಚಿತ। ಪೋಗಿಪಾಟಲಿ ಪುರವಗೆಲಿದವನೂ॥ ತ್ಯಾಗಮಾಡಿದ ಬಳಿಕಲಾತನ। ಯೋಗ್ಯತೆಯು ಅನುಕೂಲಕಂಡರೆ। ಆಗಪ್ರೀತಿಸಬಹುದು ಇಲ್ಲವೆ। ಪೋಗುನೀನೆಂದರುಹೆ। ಪೋಪನು ॥೪॥ ಒಂದು ಕಾಲದಿ ಶತ್ರುವಾಗಿಹನೂ। ಕಾಲಗಳು ಕಳಿಯಲು। ಮುಂದಕಾತನೆ ಮಿತ್ರನಾಗುವನೂ॥ ಬಂದಿರುವ ಕೋಪವನೆಸೈರಣೆ। ಇಂದಶಮಿಸುತ ಭೂಮಿಪಾಲರು। ಬಂದರೆದು ಪರಿಯಾವಸಾನದಿ। ಹೊಂದುವದು ಸತ್ಪಥವ ಕುವರನೆ ॥೫॥

ರಾಗ ಕೇದಾರಗೌಳ ಅಷ್ಟತಾಳ

ಮೆಚ್ಚಿದೆ ಬಾಗುರಾಯಣ ನಿನ್ನಮಾತನು। ಹುಚ್ಚನಂದದಿವರ್ತಿಸೀ॥ ಹೆಚ್ಚಿನಲಾಭವ ಕಳೆದುಕೊಳ್ಳುವುದನ್ನು। ಎಚ್ಚರಿಸುತ ಪೊರೆದೇ ॥೧॥ ಎನುತವಿಶ್ರಾಂತಿಗೆ ಪೋಗಲು ಉಭಯರು। ದಿನಮಣಿ ಅಸ್ತಮಿಸೆ॥ ತನಗಿದೆಸಮಯ ವೆಂದೆನ್ನುತ ಉಕ್ಕಡ। ಸನಿಹದಿ ಸಿದ್ಧಾರ್ಥನು॥೨॥ ಭೀತನಾದವನಂತೆ ಬೇಕಾಗಿ ನಟಿಸುತ। ಕಾತುರದಿಂಪಿಂದಕೆ॥ ಆತುರದಿಂಪೋಗಿ ನಾಲ್ಕುಕಡೆಗೆ ನೋಡು। ತಾತನು ಮುಂಬರಲು ॥೩॥ ಕಾವಲುಗಾರರು ನೋಡುತಲಾತನ। ಆವನೊನಿಶಿಯೊಳಗೇ॥ ತಾವನುಹುಡುಕುತ ನುಸುಳುವಂತಿದೆಎಂದು। ಧಾವಿಸಿ ಆತನೊಳು ॥೪॥ ಉಂಡಿಗೆತೋರೆಂದು। ಕೇಳಲಿಕಾತನು। ಉಂಡಿಗೆ ಎಂದರೇನು॥ ಕಂಡವನಾನಲ್ಲ ದಮ್ಮಯ್ಯ ಬಿಡಿರೆಂದು। ಮಂಡೆತಗ್ಗಿಸಿಪೇಳಲು ॥೫॥ ಕದ್ದುಬಂದವನಂತೆ ತೋರ್ಪುದು ಕಟಿಯೊಳ। ಗಿದ್ದುದೇನೆಂದುನೋಡೆ॥ ಹೊದ್ದಿಸಿಕೊಂಡ ಲಕೋಟೆಯು ಕಾಣಲು। ಸಿದ್ಧಾರ್ಥಕನಪಿಡಿದು ॥೬॥

ರಾಗ ಕೇದಾರಗೌಳ ಝಂಪೆ

ಆರುನೀನೆಲ್ಲಿಂದಲೀ। ಬಂದವನು। ಸಾರುತಿಹುದಾಕಡೆಯಲೀ। ಮೀರಿಉಕ್ಕಡವನ್ನೀನು। ಪೋಗಲಿಕೆ। ದಾರಿಹುಡುಕುವೆಯಏನೂ ॥೧॥

Scanned by CamScanner

ರಾಗ ಕೇದಾರಗೌಳ ಅಷ್ಟತಾಳ

ತ್ವರಿತದಕೆಲಸಕೆ ತೆರಳಲು ಉಂಡಿಗೆ| ತರದೆನಾ ಬಂದೆನಿಲ್ಲಿ| ಹೊರಗೆ ಪೋಗಲುಬಿಡ| ಬರುವೆನುನಾಳಿಗೆ| ತಿರುಗಿಇಲ್ಲಿಯೆ ಎನಲು ||೧||

ರಾಗ ಕೇದಾರಗೌಳ ಝಂಪೆ

ನೋಡೆವಂಚಕ ನೀರ್ಪನೂ| ನಮಗೇಕೆ| ರೂಥಿಪತಿ ಬಳಿಗಿವನನೂ|| ಮಾಡದೇ ತಡವನಾವು| ಕೊಂಡೊಯಿದು| ನೀಡುವುದೆ ಕರ್ತವ್ಯವೂ ||೧|| ಅರಮನೆಯ ಬಳಿಗಾತನಾ| ಕರತಂದು| ಹೊರದ್ವಾರದಾಚಾರನಾ|| ಕರೆದುಪೇಳಲು ವಿಷಯವಾ| ಪೋಗಿನಾ| ದೊರೆಗೆ ಅರುಹುವೆ ನೆನಲವಾ ||೨||

ರಾಗ ಕೇದಾರಗೌಳ ಅಷ್ಟತಾಳ

ಮಲಯಕೇತುವು ಬಾಗುರಾಯಣರುಭಯರು| ಸಲಿಗೆಯೊ ಳ್ಪರಿಯಂಕದಿ|| ಕುಳಿತು ರಾಕ್ಷಸನಂಥ ಛಲಗಾರರಿರುವರೆ| ತಿಳುಹು ದೊರೆಯೆಎಂದನು||೧|| ಅನಿತರೋಳ್ ದ್ವಾರಪಾಲನುಬಂನು ವಂದಿಸಿ| ಧನಿಯ ರಾಜ್ಞೆಯನೆವಿಾರಿ|| ಜನಒಬ್ಬಉಂಡಿಗೆ ಕೊಳ್ಳದೆ ಉಕ್ಕುಡ| ಸನಿಹದಿಪೋಗುತಿರೆ ||೨|| ಹಿಡಿಯಲುಕಾವಲು ಗಾರರು ಆತನ| ನಡುವಿನ ದಟ್ಟಿಯೊಳು|| ಮಡಗಿಕೊಂಡಿಹ ಲಕ್ಕೋಟೆಯಕಾಗದವುಸಹಿ| ತೊಡನೆ ತಂದಿಹರಿಲ್ಲಿಗೆ ||೩|| ಎನ್ನೊಳುಅಪ್ಪಣೆ ಕೇಳಿಬಾರೆನ್ನಲು| ಸನ್ನಿಧಿಗರುಹಬಂದೆ|| ಇನ್ನುತಾವೀಯುವ ಆಜ್ಞೆಯನವರಿಗೆ| ಬಿನ್ನೈಸಿಬಹೆನೆಂದನು ||೪||

ರಾಗ ಮಧ್ಯಮಾವತಿ ತ್ರಿವುಡೆ

ಮಲಯಕೇತುವು ಪೇಳ್ದಚಾರನೆ| ಕಳುಹುಕಾಗದ ಸಹಿತಲಾತನ| ಬಳಿಕಲವ ನಾರೆನುತ ತಿಳಿಯುವೆ| ನೆನಲುಕೇಳ್ದು ||೧|| ಬಾಗುರಾಯಣನಾ ಗವಾಕ್ಷದಿ| ಸಾಗಿಸುತ ದೃಷ್ಟಿಯನು ತಿಳಿವನು| ಈಗಬಂದವ ಹೊಸಬನೋಅಧಿಕಾರಿ ಚರನೋ||೨|| ಕೇಳಿರಾತನನೆಂದು ಪೇಳಲು| ಕೇಳಿಸಿದ್ಧಾರ್ಥಕನು ಆಕ್ಷಣ| ಪೇಳದನು ಆಮಾತ್ಯರಾಕ್ಷಸನಾಳುಎನುತಾ ||೩|| ಇಲ್ಲಿಬಂದುಂಡಿಗೆಯ ಕೇಳದೆ| ಎಲ್ಲಿಗೈದುತ ಲಿರ್ದೆಶಾಸನ| ಅಲ್ಲಗಳೆಯಲಿ ಕಂಥಕಾರ್ಯಗ ಳಿಹುದೊನಿನಗೆ ||೪|| ತ್ವರಿತಕಾರ್ಯಕೆ ಎನ್ನಧನಿಗಳು| ತೆರಳುಸೀಘ್ರದೊ ಳೆನಲುಪೋದೆನು| ಮರೆತೆನುಂಡಿಗೆ ಕೇಳಲಿಕೆನೀವ್| ಪೊರೆವುದೆನಲೂ ||೫||

ರಾಗ ಕೇದಾರಗೌಳ ಅಷ್ಟತಾಳ

ದೊರೆಯಾಗ ಬಾಗುರಾಯಣನನು ನೋಡುತ್ತ| ಚರನೊಳ್ಕಾಗದ ವಿತ್ತಂತೆ| ಪರಿಕಿಕಿಸುನೀನೆಂದು ಪೇಳಲಿಕಾತನು| ಕರದೊಳು ಕೊಳುತಲಾಗ ||೧|| ಅರಸುಕುಮಾರನೆ ರಾಕ್ಷಸನಾಮುದ್ರೆ| ಇರುವ ಲಕೋಟಿಯೊಳು|| ಬರದಿಹ ಕಾಗದ ವಿರುತಿರೆ ಮು

ದ್ರೆಯ| ಹರಿಯದೆ ನೋಡಲಿಕೆ ||೨|| ಅಪ್ಪಣೆಯಾದರೆ ವಪ್ಪದಿ ಬಿಡಿಸುತ| ಇಪ್ಪ ಕಾಗದವನೋಡಿ|| ಗುಪ್ತವೊ ಬಹಿರಂಗ ವಾದುದೊಪೇಳುವೆ| ತೃಪ್ತಿ ಯಾಗುವ ತೆರದಿ||೩|| ಏನ್ನೈಯ್ಯ ಮಿತ್ರನೆ ನಮ್ಮೊಳುಭೇದವೆ ನೀನೆನ್ನಕಾರ್ಯದೊಳು||ನ್ಯೂನವಿಲ್ಲದೆ ಗೈಯ್ವ ಗುರುವಿರೆಕಾಗದ ವೇನೆಂದು ನೋಡೆಂದನು ||೪|| ಬಾಗುರಾಯಣನಾಗ ಮುದ್ರೆಯನೊಡೆಯದೆ| ಕಾಗದವನೆತೆಗೆದು|| ಮೇಗಿಹಮುದ್ರೆಗು ಕಾಗದಕಿಹ ಮುದ್ರೆ| ಯಾಗಿಹುದೊಂದೆಂದನು ||೫|| ಯಾರಿಗೆಯಾವ ಕಾರಣಕಾಗಿ ಪತ್ರವ| ಯಾರಿದಬರೆದರೆಂದೂ|| ತೋರದು ಲಿಪಿಇಂದ ದೊರೆಕುಮಾರನೆನೋಡು| ಸ್ವಾರಸ್ಯವಿಹುದುಕೇಳು ||೬||

ರಾಗ ಬೇಗಡೆ ಅಷ್ಟತಾಳ

ಶ್ರೀಮತೂ ಸ್ಥಳದೊಳಗೆ ಇರುವರಿಗೇ| ಪರಸ್ಥಳದೊಳಿರುವಾ| ಪ್ರೇಮಿನಮನವು ಕುಶಲಉಭಯರಿಗೇ|| ಆಮಹಾ ಪ್ರತಿ ಪಕ್ಷಿಎನಗಿರೆ| ಲಾಮನುಷ್ಯನ ತೊರೆದುಎನ್ನನು| ನೇಮದಿಂ ಗುಣಕಥನಗೈದುದು| ಸ್ವಾಮಿಯವ ರ್ಯೋಗ್ಯತೆಯ ಕುರುಹಿದು||೧|| ಇದುಪರೋಕ್ಷದೊ ಳೆನಗೆಶೃತವಾಯ್ತು| ಆಭರಣ ಸಂಪುಟ| ಮೊದಲುಬಂದೆನಗದುವೆ ವಶವಾಯ್ತು|| ಒದಗಿದಾಪ್ತರು ಸಮಯವೀಕ್ಷಿಸಿ| ಅಧಿಕಸಾಹಸ ದಿಂದಕಾರ್ಯವ| ಹದವರಿತು ಗೈದಪರು ಸಿದ್ಧಿಯುವದಗಿದಾನಂತರದೊ ಳವರಿಗೆ ||೨|| ಅರಿಯ ಬೊಕ್ಕಸ ಕೆಲರಪೇಕ್ಷೆಗಳೂ| ಕೆಲರಿಂಗೆ ಇರುವುದು| ಅರಿಯಸೇನೆಯ ವಶದಆನೆಗಳೂ|| ಇರುವರ್ರೈಹಗೆ ರಾಜ್ಯಬಯಸುವ| ಪರಮಸಾಹಸಿಗಳಿಗೆ ಯೋಗ್ಯತೆ| ಅರಿತು ನೀಡಲುಬೇಕು ಚಿತ್ತದೊ| ಳಿರಲಿಪ್ರಕೃತಕೆ ಪತ್ರಜೊತೆಯಲಿ ||೩|| ಕಳುಹಿರುವ ಆಭರಣ ಸಂಪುಟವಾ| ವೀಕ್ಷಿಸಲುಚಿತ್ತಕೆ| ತಿಳಿವುದಲ್ಲದೆ ರಾಜಸಂಪದವಾ|| ಬಳಸೆ ಸರ್ವಸ್ವತಂತ್ರ ವಿರ್ಪುದು| ಬಲಸಹಿತ ಸಮಯವ ನಿರೀಕ್ಷಿಸಿ| ಸ್ಥಳವಸೇರುವೆ ಆಪ್ತನೊಚನದಿ| ತಿಳಿವುದೆನು ತೊಕ್ಕಣಿಸಲಾಗಿದೆ ||೪||

ರಾಗ ಝಂಜಾಟಿ ಅಷ್ಟತಾಳ

ಮಲಯಕೇತುವೆ ಕಾಗದವನೂ| ಬಹು| ತಿಳುವಿನ ಮತಿಗಳೆ ಲಿಖಿಸಿಚಾರನನೂ|| ಕಳುಹಿರಬೇಕೀಗ ಲೀತನಮುಖದಿಂದ| ತಿಳಿಯಬೇಕೀ ಗೀರಹಸ್ಯವ| ಬಳಕೆಯರ್ಥದ ವಿವರವೆಲ್ಲವ ||೧||

(ಬಾಗುರಾಯಣ) ಎಲವೊಚಾರಕನೆ ಕಾಗದವನ್ನೂ| ಕೊಟ್ಟು| ಕಳುಹಿರ್ಪರಾರು ಎಲ್ಲಿಗೆನೀನು|| ತಲುಪಿಸಬೇಕೆಂದು ಪೊರಟಿಹೆ ನಿನ್ನಯ| ಬಳಿಯೊಳಿಹ ಒಡವೆಯನು ತೋರಿಸಿ| ತಿಳುಹು ನಿಜಸಂಗತಿಯ ನೆನ್ನಲು ||೨|| ನೆಪ್ಪನುಮರೆತೆ ಲೇಖನವನ್ನೂ| ಕೊಟ್ಟ| ಅಪ್ಪರಪೆಸರನ್ನುನಾನು|| ಇಪ್ಪುದಿದಾರಿಯೊ ಳ್ಪೋಗೆದೂರದೊಳೊಂದು| ಇಪ್ಪಪುರಿ ಗೊಯಿದಪೆನು ವಡವೆಯು ಇಪ್ಪುದನು ನಾನರಿಯೆ ನೆಂದನು ||೩||

Scanned by CamScanner

ರಾಗ ಘಂಟಾರವ ಅಷ್ಟತಾಳೆ

ಎಲವೊಕಂಚುಕಿ ವಂಚಕನೀತನ| ಬಳಿಯೊಳಿಹ ವಡವೆಯನು ತೋರಲಿ| ಥಳಿಸಿ ಕಸೆ ಯೊಳಗೆಂದನೂ ||೧|| ಥಳಿಸೆಕಂಚುಕಿ ಚಾರನುಮಿಡುಕುತ್ತ| ಮಲಮಲನೆ ಮರುಗಲ್ಕೆಕಕ್ಷದಿ। ಕೆಳಗೆಸಂಪುಟಬೀಳಲು ||೨||

ರಾಗ ಸೌರಾಷ್ಟ್ರ ತ್ರಿವುಡೆ

ದೊರೆಯು ಇದಿರಿಗೆ ಸಂಪುಟವತಂ। ದಿರಿಸಿಚಾರನೊ ಳಿದ್ದಿತೆನ್ನುತ। ಒರೆಯೆಕಂಚುಕಿ ಬಾಗುರಾಯಣ ನೋಡುತದನೂ ||೧|| ಕಾಗದಕು ಪೆಟ್ಟಿಗೆಗು ಇತ್ತಿಹು। ದೀಗಮುದ್ರೆಯು ಒಂದೆಎನ್ನುತ| ಬಾಗುರಾಯಣ ನೃಪಗೆತೋರಿದ। ನಾಗಲದನೂ ||೧|| ಅರಸಪೇಳಿದ ಸಖನೆಪೆಟ್ಟಿಗೆ। ತೆರದುಬಾಯನುಒಳಗೆಏನಿದೆ। ದೊರೆಗಳ್ಹತ್ತಿರ ವಿರುವಸಂಪುಟ ದಂತೆಇಹುದು ||೩|| ತೆರೆಯೆಪೆಟ್ಟಿಗೆಬಾಯ ಮುದ್ರೆಯ। ಒರಸದಂದದಿ ಒಳಗೆ ತುಂಬಿದ| ಪರಿಪರಿಯ ಆಭರಣಗಳನಾ| ದೊರೆಗೆತೋರೆ ||೪||

ವಾರ್ಧಿಕ

ಅರಸಪೇಳಿದ ಮೊದಲುರಾಕ್ಷಸನು ನಮ್ಮೆಡೆಗೆ| ಬರಲಾತನಿಂಗೆನಾ ನಿತ್ತ ಒಡವೆಗಳಿವನು। ಧರಿಸಿಕೊಳ್ಳದೆ ಚಾರನೊಡನೆ ಕಳುಹಿರ್ಪಪರಿ। ಯರಿಯದಾಗಿದೆ ಎನ್ನಲೂ|| ಅರುಹಲಾ ಬಾಗುರಾಯಣ ರಾಜಯೋಗ್ಯಮಾ। ಗಿರುವಆಭರಣಮಂ ಚಂದ್ರಗುಪ್ತನಿಗಿತ್ತು। ಸ್ಥಿರವಾದ ಅಧಿಕಾರಮಂಪಡೆವೆ ನೆಂದೆನುತ| ರಾಕ್ಷಸನು ಕಳುಹಿರ್ಪನೂ||೧||

ರಾಗ ಮಧ್ಯಮಾವತಿ ತ್ರಿವುಡೆ

ಇದಕೆಸಂಶಯ ಬೇಡಬಾಲಕ| ಒದಗಿತೀಕಾಗದದಿ ಸಾಕ್ಷಿಯು। ಎದುರಿಗಿರುತಿಹ ಚಾರಆತನಿ ಗಾಪ್ತನಿಹನೂ ||೧|| ತಿಳಿವುದೀತನ ಥಳಿಸೆಸತ್ಯವು। ಬಳಿಕಯೋಚನೆ ಮಾಳ್ಪುದೆನ್ನುತ| ತಿಳುಹೆಗಂಟಿನ ಕಸೆಯೊಳ್ಕಂಚುಕಿ ಥಳಿಸುಎನಲು ||೨||

ರಾಗ ಕೇದಾರಗೌಳ ಝಂಪೆ

ಚಾರಕನ ಕರದೊಯ್ಯುತಾ| ಕಂಚುಕಿಯು। ಬಾರಿಸಲಿಕಾತ ನಳುತಾ|| ಭೂರಿಕಷ್ಟಕೆ ಸಿಲುಕಿದೇ|| ದಮ್ಮಯ್ಯ। ಪಾರುಮಾಡುವರಿಲ್ಲದೇ ||೧|| ಇತ್ತರೆನ ಗಭಯವನ್ನೂ| ಪೇಳುವೆನು। ಸತ್ಯವನು ಬಿಡದೆಇನ್ನೂ|| ಭೃತ್ಯತನ ಸಾಕುತನಗೇ। ದೇಶದಿಂ| ಮತ್ತೆ ಪೋಗುವೆನು ಹೊರಗೇ ||೨||

ರಾಗ ಕೇದಾರಗೌಳ ಅಷ್ಟತಾಳೆ

(ಬಾಗುರಾಯಣ) ಭೃತ್ಯನಾದವನು ಯಾಥಾರ್ತವ ನುಡಿದರೆ| ಮತ್ತೆಅಭಯುಮಲ್ಲದೇ|| ಇತ್ತರೆಭಯುವನ್ನು ಲೋಗರುಮೆಚ್ಚರು। ಸತ್ಯವ ನುಸುರೆನ್ನಲು ||೧|| ಸ್ವಾಮಿ

ಅಮಾತ್ಯರೀ ಕಾಗದಪೆಟ್ಟಿಗೆ। ಈ ಮಹಾನಿಶಿಯೊಳಗೇ|| ನೇಮದಿಪಾಟಲಿ ಪುರದ ಪಾಲಕನಾದ। ಆ ಮೌರ್ಯ ಜಾತನಿಗೇ ||೨|| ಒಪ್ಪಿಸಿಬಾಎಂದು ಕಳುಹಿರೆ ಬಂದೆನು ಅಪ್ಪರೆಸಟೆಯಲ್ಲವೂ|| ಗೌಪ್ಯದಿ ತಿಳುಹೆಂದು ನುಡಿದಿಹಮಾತುಗಳಿಪ್ಪುದ ನರುಹುವೆನು ||೩|| ಇಲ್ಲಿತಮಗೆಆಪ್ತರಾಗಿಹಅರಸರು। ಇಲ್ಲಿಹ ಅರಸನಿಗೆ|| ಒಳ್ಳೆಯರಾಗಿದ್ದು ನಿಮ್ಮಯ ಕಾರ್ಯದಿ। ಉಲ್ಲಾಸದಿಂಗೈಯ್ವರು ||೪|| ಜಾಗರುಕತೆಇಂದ ಸಮಯ ಪ್ರತೀಕ್ಷಿಸಿ। ಸಾಗಿಸುವರು ಕಾರ್ಯವ|| ಆಗಲವರ ಮನೋರಥದಂತೆ ನಡೆಸಬೇಕಾಗಿ ತಿಳುಹು ಎಂದರು ||೫||

ರಾಗ ಕೇದಾರಗೌಳ ಝಂಪೆ

ಬಾಗುರಾಯಣ ಘರ್ಜಿಸೀ| ಕೇಳಿದನು| ಕಾಗದದೊಳಿಹಅರ್ಥದೀ|| ಈಗಲರಿವಾಗಿರುವುದೂ। ಅವರ್‍ಯಾರು। ಬೇಗಪೆಸರಂ ಪೇಳ್ವುದೂ ||೧||

ವಾರ್ಧಿಕ

ಅರುಹುವೆ ಕುಲೂತಪತಿ ಚಿತ್ರವರ್ಮಕನೊಬ್ಬ। ದೊರೆಯು ಮಲಯಾದೇಶ ಸಿಂಹನಾದಕನೊಬ್ಬ। ಇರುವನೈಕಾಶ್ಮೀರ ಪುಷ್ಕರಾಕ್ಷ ಸಿಂಧುಪಾಲಕನು ಸಿಂಧುಷೇಣ|| ಅರಸನಾಪಾರಸಿಕ ಮೇಘನಾದನುಎಂದು। ಧರಣಿಪತಿ ಚಂದ್ರಗುಪ್ತನಿಗಿವರ ಪೆಸರರುಹಿ। ವರಭೂಷಣವು ಲಕೋಟೆಯಸಹಿತ ಒಪ್ಪಿಸಲಿಕಾಮಾತ್ಯರರುಹಿರ್ದರು ||೧||

ರಾಗ ಕಾಫಿ ಅಷ್ಟತಾಳೆ

ಕೇಳಿದೆಯ ಬಾಗುರಾಯಣನೀನು। ಪೇಳಲಿಕಸದಳ ಮನದಚಿಂತೆಯನೂ ||ಪ|| ಚಿತ್ರವರ್ಮಾದಿಗ ಳಿನ್ನೋಳೀಪರಿಯಾ| ಮಿತ್ರದ್ರೋಹವಗೈದು ವರ್ತಿಪವಿಧಿಯಾ|| ಚಿತ್ತಕೆ ವೇದ್ಯವಾ ಗಿರುವುದೇನೈಯ್ಯಾ|| ಧಾತ್ರಿಯೊಳಿನ್ನಾರ ನಂಬಬೇಕಯ್ಯಾ ||೧|| ಅರಿಯದೆ ತಂದೆಯು ಸಾಮಂತನೃಪರಾ। ಪೊರೆದುದ ನೋಡಲು ಸರ್ಪಕ್ಕೆಕ್ಷೀರಾ|| ವೆರದಂತಾಯಿತುಈಗ ರಾಕ್ಷಸನೊಳಗೇ। ಇರಿಸಿವಿಶ್ವಾಸವ ಕೈಕೊಟ್ಟರೆನಗೇ ||೨|| ನೋಡಿಚಾರನ ಮುಖವ ಕರೆದುಹತ್ತಿರದೀ। ವೋಡುರಾಕ್ಷಸನೀಗ ತನ್ನಮಂದಿರದಿ|| ಮಾಡುವನೇನನ್ನುವೀಕ್ಷಿಸುತಲ್ಲಿ| ಮಾಡದೆತಡವನು ಪೇಳುಬಂದಿಲ್ಲಿ ||೩||

ರಾಗ ಸೌರಾಷ್ಟ್ರ ತ್ರಿವುಡೆ

ದೊರೆಯ ಅಪ್ಪಣೆಯಂತೆ ಚಾರನು। ತೆರಳಿದನು ರಾಕ್ಷಸನಿಕೇತದ| ಹೊರಗಡೆಯೆ ನಿಂತಿರಲಿ ಕಾಮಾತ್ಯಕನು ಒಳಗೇ ||೧|| ತನ್ನ ಬಳಿಯಣ ದೂತಗೆಂದನು| ಇನ್ನು ತಡಮಾಡದೆಯೆ ಸೇನೆಯು। ಮುನ್ನಪೇಳಿದ ತೆರದಿಸಿದ್ಧತೆ। ಯನ್ನುಹೊಂದಿ ||೨||

Scanned by CamScanner

ರಾಜಪುತ್ರನ ಸುತ್ತವ್ಯೂಹವು। ರಾಜಸಲಿ ಸಾಮಂತರಾಗಿಹ। ರಾಜರೊಳಗಾ ಚಿತ್ರವರ್ಮನು ಸಿಂಧುಷೇಣ ||೩|| ಪಾರಸಿಕಪತಿ ಮೇಘನಾವನು। ಶೂರನಾಗಿಹ ಸಿಂಹನಾವನು। ವೀರನಾ ಕಾಶ್ಮೀರಪತಿಯಾ। ಪುಷ್ಕರಾಕ್ಷ ||೪|| ಐದುಮಂದಿಗ ಳಿವರುಸಮ್ಮಯ। ಸಾಧನೆಗೆಚ್ಯುತಿ ಬಾರದಂದದಿ। ಐವಲಾನೀ ಗವರಹಿಂದಕೆ ಪೋಪೆನೆನ್ನ ||೫|| ಜೊತೆಗೆಶಕ ಗಾಂಧಾರ ಮಗಧರು। ಅತಿಬಲರು ವ್ಯೂಹವನೆ ರಚಿಸುತ। ಮಿತದಿಬರಲಾ ಹೂಣ ಚೀಣರು ಹಿಂದೆಬರಲೀ ||೬|| ಪರುವತೇಶನ ಸೇನೆಗಧಿಪತಿ। ಸರುವಶಕ್ತನು ಶೇಖರನುಅವ। ಪುರವರಕ್ಷಿಸು ತಿಲ್ಲಿಸೇನೆಯ ಸಹಿತಲಿರಲಿ ||೭|| ದಳಪತಿಗ ಳೆಲ್ಲರಿಗೆನಾವಿದ। ತಿಳುಹಹೇಳಿದ ರೆಂದುಪೇಳುತ। ಬಳಿಗೆಬಾರೆಂ ದೊರೆಯೆ ರಾಕ್ಷಸ ನೊರೆದುವನ್ನೊ ||೮||

ರಾಗ ಮುಖಾರಿ ಏಕತಾಳ

ಬಾಗಿಲೊ ಳಾಲಿಸುತ್ತ ಚರನೂ। ತನ್ನಯದೊರೆಗೆ। ಪೋಗಿತಿಳುಹೂವೆ ನೆನ್ನುತ್ತವನೂ। ಸಾಗುತಪರುವತ ತನಯಗೆಬಂದಿಸು। ತಾಗಳೆಅರುಹಿದ ಕೇಳಿದಪರಿಯನು ||೧||

ರಾಗ ಕೇದಾರಗೌಳ ಅಷ್ಟತಾಳ

(ಮಲಯಕೇತು) ಕೇಳಿದೆಯಮಿತ್ರ ರಾಕ್ಷಸಪೌಜಿಗೆ। ಆಳಿನಮುಖದಿಂದಲೀ|| ಪೇಳಿಕಳುಹಿದರ್ಥ ವನುಬಂದುಚಾರನು। ಹೇಳಿದು ದರಿತೆಯಷ್ಟೇ ||೧|| ಇರಲುಬೇಕಂತೆ ಈಪುರದೇಶವನೆ ಕಾದು। ಪರಮಾಪ್ತ ಶೇಖರನು|| ಅರಿತೆಯ ನಮಗೆ ದ್ರೋಹಿಗಳಾದ ಆಚಿತ್ರ। ವರುಮಾದಿ ನಾಯಕರೂ ||೨|| ಎನ್ನಯಸುತ್ತಲು ವ್ಯೂಹವರಚಿಸುತ್ತ ಮುನ್ನರಾಕ್ಷಸ ನೆಂದಂತೆ। ಸನ್ನದ್ಧರಾಗಿ ಎಚ್ಚರಿಕೆಯೊಳ್ಸಾಧನೆ|| ಯನ್ನುಸಾಧಿಸ ಬೇಕಂತೆ ||೩|| ಕೆಲವುದೇಶಾಧಿಪ ರೊಡಗೂಡಿರಾಕ್ಷಸ। ಬಳಿಕತಾ ಬಹೆನೆನ್ನುತ। ತಿಳುಹಿದ ಭಾವವ ನೋಡಲು ಉಕ್ಕಡ। ದೊಳಗೆ ಶಿಕ್ಕಿದಚಾರನು||೪|| ತಿಳುಹಿದ ಮಾತು ನಿದರ್ಶನವಾಯಿತು। ಬಳಿಕನೋಡುವೆನೆನ್ನುತ|| ಮಲಯಕೇತುವು ಮುಖವನ್ನೆಗಂಟಿಕ್ಕುತ। ಬಳಿಯ ಚಾರಕಗೆಂದನು||೫|| ಅರಸರಪ್ಪಣೆಎಂದು ಪೇಳುತಾಮಾತ್ಯನ। ಕರೆದುತಾ ವಡಗೂಡಿಯೆ|| ತೆರಳುನೀಬೇಗದೊ ಳೆನ್ನುತರೋಷದಿ। ಅರುಹಲು ಚಾರಕಗೇ ||೬||

ರಾಗ ಕಾಫಿ ಅಷ್ಟತಾಳ

ಪೋಪೆನ್ನೈ ಬುದ್ಧಿಪೋಪೆನ್ನೈ ||ಪ|| ಪೋಪೆನೆನ್ನುತಚಾರ ಪೊರಟುಮಾರ್ಗದೊಳು। ಈ ಪರಿರಾಕ್ಷಸ ನಲ್ಲಿಕೋಪಗಳು ||ಅ||ಪ|| ಬಂದಿಹುದೇಕೊ ಹರ್ಷದೊಳಿಲ್ಲದೊರೆಯು। ಹೊಂದಿದೆಮುಖದೊಳು ಕೋಪದಕಿಡಿಯು|| ಇಂದೇನೊ ಅಪರಾಧಗೈದುರಾಕ್ಷಸನು। ತಂದಿರಬೇಕಿಗ ದೊರೆಗೆಕೋಪವನು||೧|| ಎನುತಲಾಲೋಚಿಸು ತೈದಿರಾಕ್ಷಸಗೆ। ಸನಿಹದಿನಿಂದು ಕೈಮುಗಿದೆಂದನವಗೇ|| ಧನಿಗಳ ಅಪ್ಪಣೆಯಾಗಿಹುದೀಗ। ಘನಜವ

ದಿಂದಲಿ ಪೊರಡಿರಿಬೇಗಾ ||೨|| ನೋಡಿವರಾಕ್ಷಸ ಚಾರನಮುಖವಾ। ಮಾಡಿದತರ್ಕವ ಮನದೊಳುಬಹುವಾ|| ರೂಢಿಯ ಮುಟ್ಟುತ ನಮಿಸಿದೂರದಲೀ। ಜೋಡಿಸಿಕರಗಳ ಭಕ್ತಿಭಾವದಲೀ||೩|| ನಿಲ್ಲುತದೂರದಿ ಧೈನ್ಯತೆಇಂದಾ। ಸೊಲ್ಲನೆತ್ತದೆನಾವು ಕೇಳಲು ತಂದಾ। ಎಲ್ಲಾವಾರ್ತೆಯಪೇಳಿ ಪೋಪುದು ರೂಢಿ। ಎಲ್ಲಿರ ಲಿಂದಿಲ್ಲಿ ಮುಖಕೆಂಪು ಮಾಡಿ ||೪|| ಪೊರಡಿರಿಜಾಗ್ರತೆ ಎನುತವಿಚಾರ। ತ್ವರೆಮಾಡುವುದನೋಡಿ ಅರಿತೆವಿಚಾರ|| ದೊರೆಕುಮಾರಕನು ವಂಚಕರವಾಕ್ಯದೊಳು। ಭರಿತವಿಹ್ವಲನಾಗಿ ಎನ್ನೊಳ್ ರೋಷದೊಳು ||೫|| ಆಡಿದಬಿಡಿಮಾತ ಕೇಳಿಚಾರಕನು। ಮಾಡಿಲಘುತ್ವದಿ ಮಾತನಾಡಿದನು|| ರೂಢಿಯೊಳ್ಬಾಲಕ ಪ್ರಭುವಾಗಲವಗೇ। ನೋಡಿಹೃದಯವನ್ನು ವಂಚಕರವಗೇ ||೬|| ಗುಣದೊಳುದೋಷವ ತೋರಿದೋಷದೊಳು। ಗುಣವನ್ನೆ ತೋರಿಸಿ ನಷ್ಟಲಾಭದೊಳು। ಎಣಿಸುತ್ತ ಪರಿಯವಸಾನ ಗೈಯ್ಯುವರೂ। ಧನಿಗೆಹಾನಿಯ ತಂದು ಛಂದನೋಡುವರು ||೭||

ಭಾಮಿನಿ

ಇರಲಿಮನದೀ ಮಂಡಿಗೆಯುಸವಿ। ದೊರೆಕುಮಾರನೊ ಳ್ತಿಳಿವೆನೆನ್ನುತ। ಕರೆದುಪೇಳಿದ ಚಾರಕನೆ ಬಹೆ ನೀಗಸಿಲ್ಲೆನುತಾ|| ಲೊರೆಯುತಾ ರಾಕ್ಷಸನು ಶಕಟನೆ। ಅರಸು ನಮ್ಮನು ಕರೆಯಕಳುಇಹ। ಧರಿಸುವಾಭರಣವನು ಸಿದ್ಧಾರ್ಥಕನಿಗಿತ್ತಿಹೆವೂ ||೧||

ರಾಗ ಮಧ್ಯಮಾವತಿ ತ್ರಿವುಡೆ

ಈಗರಾಜಸ್ಥಾನಕ್ಕೈದಲು। ಯೋಗ್ಯವಾದಾ ಭರಣತೊಡದೆಯೆ। ಪೋಗುವುದು ಅನುಚಿತವು ವಸ್ತ್ರಕರಿಂದನಮಗೇ ||೧|| ಹಿಂದೆಕ್ರಯದಾ ಮೂಲಕವೆನಮ। ಗಂದುಬಂದ ವಿಭೂಷಣವತಾ। ನಿಂದು ಧರಿಸುತ ಪೋಪೆನೆಂದೆನ ಲಾಗಶಕಟಾ ||೨|| ತರುತಲಾಭರಣಗಳ ಸಂಪುಟ। ವಿರಿಸಲಿಕೆರಾಕ್ಷಸನು ಪರುವತ। ಧರಿಸುತಿಹ ಭೂಷಣವ ನಳವಡಿಸುತ್ತಲಾಗ ||೩|| ಮಂದಿರದಿ ಚಾರಕನಬೆನ್ನಿಗೆ। ಬಂದನರಮನೆ ಗಾಗಿ ರಾಕ್ಷಸ। ಹೊಂದಿರಲುಯೋಚನೆಯ ಮುಖಕಳೆ। ಗುಂದಿಇರಲೂ ||೪|| ಬಾಗುರಾಯಣನಾಗಯೋಚಿಸಿ। ಈಗಸಿದ್ಧಾರ್ಥಕನ ಬೇರೆಡೆ। ಸಾಗಿಸದೆ ಇಲ್ಲಿರಲುಅರಸನು ಕೇಳ್ವನವನಾ ||೫|| ಹಿಂದೆಪೇಳಿದ ತೆರದಿಈತನು। ಮುಂದಕಾಮಾತ್ಯಕನ ಎದುರೊಳು। ನಿಂದು ಪೇಳ್ದಡೆ ಒಪ್ಪದೇ ಆಕ್ಷಣವೆ ದೊರೆಗೇ ||೬|| ಪೇಳುವನು ಚಾಣಿಕ್ಯಗೈದಿಹ। ಲೀಲೆ ಕಪಟವು ಎನುತಲೊಪ್ಪಿಸಿ। ಬಾಲಕನಮನ ಒಲಿಸದಿರನಾ ಮಾತ್ಯನೆನುತಾ||೭|| ಮಲಯಕೇತುವೆಕೇಳು ಚಾರನ। ಒಳಗೆ ಇರಿಸಿದ ರೊಪ್ಪವಲ್ಲವೆ। ಬಳಿಕಕರೆಸುವ ರಾಕ್ಷಸನನಾವ್ ತಿಳಿದಬಳಿಕಾ ||೮|| ಎನುತಲಾತನ ಅಪ್ಪಣೆ ಯಪಡೆ। ದನಕಚಾರನ ಒಳಗೆ ಕಳುಹಲು। ಅನಿತರಲಿ ರಾಕ್ಷಸನುಬಂದನು। ಜನಪನೆಡೆಗೇ ||೯||

ವಾರ್ಧಿಕ

ನೃಪತನಯನೇನಿನಗೆ ವಿಜಯವಾಗಲಿಎಂದು। ಸಫಲಮಾಗಲಿ ಪಿಡಿದಕಾರ್ಯ ಸೀಘ್ರ

Scanned by CamScanner

ದಿಎನುತ। ವಿಫುಲಹರಿಕೆಯನಿತ್ತು ರಾಕ್ಷಸನುಸಮ್ಮುಖಕೆ ಬರಲಾಗಮಲಯಕೇತು॥
ಅಪರೂಪ ದೊಳುಬಂದ ಬಂಧುಗಳನಾದರಿಪ। ಜಪುಣರಂದದಿ ಬಾಯೊಳ್ಸುರಿಸಿ
ತುಪ್ಪವತನ್ನ। ಅಪರದಿಗ್ಭಾಗದೊಳು ಪರಿಯಂಕದೊಳಗವನ ಕುಳ್ಳಿರಿಸಿನಮಿಸು
ತೆಂದಾ ॥೧॥

ರಾಗ ಕೇದಾರಗೌಳ ಅಷ್ಟತಾಳ

ಸ್ವಾಮಿ ಆಮಾತ್ಯರೆ ತಮ್ಮನುನೋಡಲು। ಕಾಮಿಸಿ ಕರೆಸಿದೆನೂ॥ ಕ್ಷೇಮವೆನಿಮ
ಗೀಗ ಅಪರೂಪವಾಯಿತು। ನೇಮನಿಷ್ಟೆಗಳಿದ್ದಿತೊ॥೧॥ ಮಲಯಕೇತುವೆಕೇಳು ಸೇ
ನಾನಾಯಕರಿಗೆ। ತಿಳುಹುತ್ತಸಕ್ರಮದಿ॥ ಪೊಳಲುದೇಶವಕಾವ ದಳವ್ಯಾವುದೆನ್ನುತ।
ತಿಳಿದವರನು ನೇಮಿಸಿ ॥೨॥ ಸೇನಾ ಪ್ರಯಾಣ ಸನ್ನಹವ ಗೈಯ್ಯುವಕಾರ್ಯ।
ನ್ಯೂನವಾಗದತೆರದೀ॥ ನಾನೆಆಜ್ಞೆಯನೀವ ತ್ವರಿತದಿನಿನ್ನನು। ಕಾಣಲಾಗದೆ ಪೋ
ದುದೈ ॥೩॥ ಸ್ವಾಮಿಆಮಾತ್ಯರೆ ತಾವು ಆಜ್ಞಾಪಿಸಿ। ನೇಮಿಸಿದಾಸೈನ್ಯದಾ॥ ನೇಮ
ಕಾತಿಯಕೇಳ ಬಯಸಿದೆನೆನಲಾಗ। ಆಮಾತ್ಯನಿಂತೆಂದನು ॥೪॥ ನಿನ್ನಯಸುತ್ತಲು
ಐವರು ಅರಸರು। ಎನ್ನಯಬಳಿವಿಡಿದೂ॥ ಇನ್ನೆರಡರಸರು ಉಳಿದವರ್ಹಿಂದಕೆ। ಸೈನ್ಯ
ಸಹಿತಪೋಗಲು ॥೫॥ ಸಿದ್ಧವಾಗಿಹುದೆಂದು ಪೇಳಲುಪೂರ್ವದಿ। ಕದ್ದುಕೇಳಿದಚಾರ
ನು। ಸುದ್ದಿಯನರುಹಿದ ತೆರನಾಗಿರಾಕ್ಷಸ। ನಿದ್ದುದನರುಹಿದನು ॥೬॥ ಆಗಲಾರಾಜ
ಕುಮಾರನುಚಿತ್ರವ। ರ್ಮಾದಿ ಐವರಕೈಯ್ಯೊಳು। ಸಾಗಿಸಿತನ್ನನು ಚಂದ್ರಗುಪ್ತಗೆ
ಸೆರೆ। ಯಾಗಿವಪ್ಪಿಸುವನೆಂದೂ॥೭। ತನ್ನಯಮನದೊಳ ಗ್ಯೋಚಿಸಿಕೇಳಿದ। ಮುನ್ನ
ಪಾಟಲಿಪುರಕೆ॥ ಮಾನ್ಯರೆಪೋಗುವ ರುಂಟೇನು ತಿಳುಹಿರಿ। ಎನ್ನಲು ನೃಪಸುತನು
॥೮॥

ರಾಗ ಶಂಕರಾಭರಣ ತ್ರಿವುಡೆ

ಅರಸಕೇಳುನಾವೆಈಗ। ತೆರಳುವೇವು ಕುಸುಮಪುರಕೆ। ದೊರೆಗಳೆಲ್ಲಾ ಸೇನೆಸಹಿತ
ಬರವಕಾಯ್ವರು ॥೧॥

ರಾಗ ಕೇದಾರ ಗೌಳ ಅಷ್ಟತಾಳ

ಹಾಗಾದರೀಪತ್ರ ವ್ಯಾರದು ಮುದ್ರೆಗ। ಳಾಗಿಹುದಾರಿಂದಲೀ॥ ಈಗಳಿದರ ಅಭಿಪ್ರಾ
ಯಗಳೇನೆನೆ। ಲಾಗಲಾನೃಪಸುತನು ॥೧॥

ರಾಗ ಶಂಕರಾಭರಣ ಅಷ್ಟತಾಳ

ಕರದೊಳಗೆರಾಕ್ಷಸನು ಪತ್ರವನೂ। ಪಿಡಿದೋದುತೆಂದನು। ಆರಸೆನಮ್ಮಯ ಶತೃವಾ
ದವನೂ॥ ವಿರಚಿಸಿದಕಾಪಟ್ಯ ಲೇಖನ। ವಿರುವುದೈ ಮುದ್ರಿಕೆಯು ಅಂತೆಯೆ। ತೊರೆ
ಯಲೆಂದೇ ನಿನ್ನಸಖ್ಯವು। ಬರಸಿರಲು ಬೇಕೆನಲುರಾಕ್ಷಸ ॥೧॥

ರಾಗ ಕೇದಾರಗೌಳ ಅಷ್ಟತಾಳ

ಮಲಯಕೇತುವುತನ್ನ ಕರದೊಳಗಿರುತಿಹ। ವರಮನೊ ಹರಮಾಗಿಹಾ॥ ಪರಿಪರಿನ್ನೈ

ಘತ್ಯ ವಿರುವಪೆಟ್ಟಿಗೆಯಾರ। ದ್ದಿರುವುದು ಪೇಳೆಂದನು ॥೧॥

ರಾಗ ಶಂಕರಾಭರಣ ಅಷ್ಟತಾಳ

ನೋಡಿದನು ಭೂಷಣವ ರಾಕಕ್ಷಸನೂ। ಮನದೊಳಗೆ ಯೋಚನೆ। ಮಾಡುತಿದನೆನ
ಗೀಯೆ ಭೂವರನೂ॥ ನೀಡಿದೆನು ಸಿದ್ಧಾರ್ಥನಿಗೆಅವ। ಮಾಡಿದುಪಕಾರವನೆ ಸ್ಮರಿಸು
ತ। ಕೇಡಕಾಲವು ಪ್ರಾಪ್ತವಾಯಿತೆ। ಆಡಲೇನೀಗಿದಕೀಉತ್ತರ॥೧॥ ಕಾಗದವನೋಡಿ
ದರೆ ಮೌರ್ಯಜನೂ। ಮೊದಲೆನಗೆ ಭೂಷಣ। ಸಾಗಿಸಿದಹಾಗಿಹುದು ನಾನಿದನೂ॥
ಆಗರುವನಿಗೆ ಸಲ್ಲಿಸುತಪ್ರತಿ ಯಾಗಿಅಧಿಕಾರವನೆ ಬಯಸಿದ। ಹಾಗುನಾನೂ ಐವರರ
ಸರು। ಈಗಳೀಪರುವತ ಕುಮಾರನ ॥೨॥ ಹಿಡಿದುಮೌರ್ಯಜ ಗೊಪ್ಪಿಸುವೆವೆಂದೂ।
ಸಂಕೇತವೆಸಗುತ। ಒಡನೆಸೈನ್ಯವ ಕೂಡಿಸಿಹೆವೆಂದೂ॥ ದೃಢವಪಡಿಸುವ ಅರ್ಥಹೊಂ
ದಿಸೆ। ಕೆಡುಗಲಿಯು ಚಾಣಕ್ಯನಲ್ಲದೆ। ಪೊಡವಿಯೊಳು ಬೇರಿಲ್ಲಜನಗಳು। ಒಡನೆ
ಬಂದಿತು ನಮಗೆಕಷ್ಟವು ॥೩॥

ರಾಗ ಕೇದಾರಗೌಳ ಅಷ್ಟತಾಳ

(ಮಲಯಕೇತು) ಸುಮ್ಮನೆನಿಂತಿರಿ ಭೂಷಣವನೆ ನೋಡಿ। ನಿಮ್ಮದಲ್ಲವೆ ಪೇಳಿರೀ॥
ತಮ್ಮಕೈಯೊಳಗಿಹ ಪತ್ರದಮುದ್ರೆಯು। ನಮ್ಮಲ್ಲಿ ಇಹುದೆಹೇಳಿ ॥೧॥

ರಾಗ ಶಂಕರಾಭರಣ ತ್ರಿವುಡೆ

ದೊರೆಯೆನನ್ನ ದಲ್ಲವೈಯ್ಯ। ವಿರಸತರಲು ನಮಗೆನಿನಗೆ। ಗುರಿಯನಿಟ್ಟೆ ಕಪಟ
ಕೃತ್ಯ। ಅರಿವುದೈಮುಂದೆ ॥೧॥

ರಾಗ ಕೇದಾರಗೌಳ ಅಷ್ಟತಾಳ

ಇರಲಿಭೂಷಣವಿದು ನಿಮ್ಮದೆಂದಾದರೆ। ಪರರಕಪಟವಲ್ಲಷ್ಟೇ॥ ಧರಿಸಿಕೊಳ್ಳಲಿಕಾಗಿ।
ನಾವಿತ್ತವಡವೆಯು। ತರಿಸಿಈಗೆನ ಲರಸ ॥೧॥

ರಾಗ ಶಂಕರಾಭರಣ ಅಷ್ಟತಾಳ

ಅರಸನೇನೀನಿತ್ತ ಭೂಷಣವಾ। ತರಿಸಲಿಕೆ ಎನ್ನೊಳು। ಇರುವುದಿಲ್ಲೈ ಬೇರೆಪೋಗಿ
ರುವಾ। ಪರಿಯನರುಹುವೆ ಓರ್ವದೂತನು। ವಿರಚಿಸಲು ಸಂತೋಷಕಾರ್ಯವ। ಪರ
ಮಪ್ರೀತಿಯೊ ಳವಸಿಗಿತ್ತೆನು। ಇರುವುದಿದೆ ಮಂಡನಗಳಾದರೆ ॥೧॥ ಅನ್ಯರಿಗೆ ನಾ
ನಿತ್ತ ಬಳಿಕದುವೇ। ಆದಿನದ ಮೊದಲಾ। ಗೆನ್ನದಲ್ಲವು ಎಂದು ಅರಿತಿರುವೇ॥ ಎನ್ನ
ಪ್ರಾಣವು ಪೋಪುದೆಂದರು। ಉನ್ನತದ ಸತ್ಯವನುಬಿಡೆನಾ। ಸನ್ನಿಧಿಯೊ ಳ್ಸಟೆಯಾಡೆ
ನೆಂದಿಗು। ಇನ್ನು ಪೇಳುವ ದೇನಿದೆಂದನು ॥೨॥
(ಬಾಗುರಾಯಣ) ಅರಸುಮಗ ನಿರ್ಧರಿಸಬೇಕೆನುತಾ। ಕೊಟ್ಟಿರುವ ವಡವೆಯು।

Scanned by CamScanner

ಚರನುಧರಿಸಲಿ ಕ್ಯೋಗ್ಯನೇ ಎನುತಾ॥ ಅರಿಯದೇ ಕೊಡಬಹುದೆ ಅಂತಃಕರಣ ವ
ಪ್ರಿತೆಲೋಕ ಮೆಚ್ಚ್ಚುವೆ।ಹಿರಿಯರಾಗಿಹ ನಿಮಗೆಯೋಗ್ಯವೆ। ಅರುಹಿರೆನ್ನಲು ಬಾಗು
ರಾಯಣ ॥೩॥ ಬಾಗುರಾಯಣ ಕಾರ್ಯವನೆನೋಡಿ। ಕೊಟ್ಟಿರುವೆನ್ನೆಯ್ಯಾ।
ಯೋಗ್ಯತೆಯು ಪಾತ್ರವನೆ ನಾನೋಡಿ॥ ನೀಡಲಿಲ್ಲೀ ವಡವೆಎನ್ನುತ। ನೀಡಿದನು
ಉತ್ತರವ ರಾಕ್ಷಸ। ರೂಢಿಪತಿಯಾ ಮಾತಕೇಳುತ। ಭೇಡಿಸಲು ರಾಕ್ಷಸಗೆನಾಟಲು
॥೪॥

ರಾಗ ಕೇದಾರಗೌಳ ಅಷ್ಟತಾಳ

(ಮಲಯಕೇತು) ಮಿತ್ರನೆಆಮಾತ್ಯ ರೀಗಂಥಪ್ರಬಲಕಾ। ಯರ್ಾರ್ಥದಿಕೊಟ್ಟಿಹ
ರೈ॥ ಇತ್ತಿಹಉತ್ತರಸರಿಇದೆಎನ್ನುತ। ಎತ್ತಿಚುಚ್ಚಿದ ಮಾತಿಲೀ ॥೧॥

ರಾಗ ಶಂಕರಾಭರಣ ಅಷ್ಟತಾಳ

ಕಾಗದಕುಪೆಟ್ಟಿಗೆಗು ಹಾಕಿರುವಾ। ಮುದ್ರೆಗಳು ನಿಮ್ಮದು। ಆಗದಿರ್ದಡೆ ನೋಡಿ
ಅಕ್ಷರವಾ॥ ಈಗನಿಮ್ಮಯ ರಾಯಸದಜನ। ವಾಗಿರುವ ಶಕಟ ಬರದಿಹು। ದಾಗಿಹು
ವೆ ಈಕ್ಷಿಸಿರಿಎನುತಲಿ। ಬಾಗುರಾಯಣ ಕೇಳಲಾತನ ॥೧॥

ರಾಗ ಕೇದಾರಗೌಳ ಅಷ್ಟತಾಳ

ಬರೆದವ ರ್ಯಾರೊನಾ ತಿಳಿಯೆನು ಎನ್ನಯ। ಹರಿಕಾರ ಬರೆದುದಲ್ಲ॥ ಅರಿಯೆನೆಆತನ
ಬರಹವತಾನೆಂದು। ಒರೆದನು ರಾಕ್ಷಸನೂ॥೧॥ ಅರಸುಕುಮಾರನು ಕಾಗದಬಂದನು।
ಚರನಕೈಯ್ಯೊಳು ಕೊಡುತ॥ ಅರುಹಿದೆನಾನೆಂದು ಶಕಟದಾಸನಕೈಯ್ಯ। ಬರಹವ
ಬರೆಸಿತಾರ್ರೈ ॥೨॥

ರಾಗ ಮಧ್ಯಮಾವತಿ ತ್ರಿವುಡೆ

ಎನುತಲಪ್ಪಣೆ ಗ್ಯೆಯ್ಯೆಚಾಗನು। ಘನಜವದಿ ಪೋಗುತ್ತಶಕಟನೊಳ್। ಧನಿಯ
ಅಪ್ಪಣೆಯಂತೆ ಕಾಗದಬರಸಿತರಲೂ ॥೧॥ ರೂಡಿಪತಿಕಾಗದಗ ಳೆರಡನು। ನೋಡಿ
ಆಮಾತ್ಯಕರೆ ಬರಹವ। ಕೇಡಬಯಸುತ ಕಪಟಗೈದಿಹರ್ಯಾರು ಪೇಳೀ ॥೨॥ ಕರದಿ
ಕೊಳ್ಳುತ ನೋಡಿರಾಕ್ಷಸ। ಬರಹವೆರಡರ ದೊಂದೆಯಾಗಿರೆ। ಹರಹರಾ ಅಹಶಕಟ
ದಾಸನು। ಅರಿಯದಂತೇ ॥೩॥ ಹೀಗೆಚಾಣಿಕ್ಯಕನ ಬಲೆಯೊಳು। ಪೋಗಿಬೀಳುತ
ಬರೆದುಪತ್ರವ। ತಾಗಿಸಿದನೇ ಮುದ್ರೆಯಾತನ ಕೈಯ್ಯೊಳಿರಲೂ ॥೪॥ ನಾನುಸಿದ್ಧಾ
ರ್ಥನಿಗೆ ಕೊಟ್ಟಿಹ। ಈನರಾಧಿಪನಿತ್ತ ಒಡೆವೆಯ। ತಾನೆಇಟ್ಟಿರೆ ಆತನಿಗೆ ಕಾಗದವು
ಸಹಿತಾ ॥೫ರ ಕೊಟ್ಟಿರಲುಬೇಕೀಗ ವಿಬುಧನ। ವಟ್ಟಿಗೀರ್ವರು ಸೇರಿತಂತ್ರವ।
ಗುಟ್ಟಿನಲಿ ಯೋಚಿಸುತ ಮಾಡಿರಬೇಕು ಎನುತಾ ॥೬॥

ವಾರ್ಧಿಕ

ಮನದಿಯೋಚಿಸುತ ರಾಕ್ಷಸನು ಇಂದಿನವರೆಗೆ। ತನಯನಂತಾ ಶಕಟದಾಸನಂ ಸಲ

ಹಿರ್ಪೆ। ಇನಿತುದುಷ್ಕಾರ್ಯ ಕಾತನಮನವು ಎಂದೆಂದು ಒಪ್ಪಲಾರದು ಯೋಚಿಸೇ॥
ಇನಿತೆಲ್ಲ ತಂತ್ರಮಂ ಚಾಣಿಕ್ಯಸಿದ್ಧಾರ್ಥ। ರಣಿಮಾಡಿಕೊಂಡ ವಂಚನೆಗೆ ಸಿಕ್ಕುತ
ಲೀತ। ಮನಕರ್ಥವಾಗದೆಯೆ ಬರೆದನೋ ಏವಂಚ। ಸಿಕ್ಕಿಬಿದ್ದೆನು ಮಾತಿಲೀ ॥೧॥

ರಾಗ ಭೈರವಿ ಝಂಪೆ

ಎನುತಚಿಂತಿಸುತ ರಾಕ್ಷಸನು ಸುಮ್ಮನೆ ಇರಲು। ಜನಪಸುತಕೋಪದಿಂ ದುರುಘು
ರುನೆನೋಡೆ॥ ತನುವಿ ಗಳವಡಿಸಿರುವ ಆಭರಣಗಳಕಂಡು। ಮನದಿ ವಿಸ್ಮೃತನಾಗು
ತೆಂದಾ ॥೧॥ ಎನ್ನಜನಕನು ಧರಿಸುತಿರ್ದನೀ ಭೂಷಣವ। ನೆನ್ನುತಲಿ ಅರಸನಿಕ್ಷ
ಯಿಸೀ॥ ಇನ್ನೇಕೆಈತನಿಗೆ ಕ್ಷಮೆಎಂದು ಚಾರಕನ। ತನ್ನಹತ್ತಿರಕೆ ಕರೆದೆಂದ॥೨॥
ಎಲವೊಹಂಸಕನೆಈ ಆಮಾತ್ಯಧರಿಸಿರುವ। ಹೊಳೆಯುತಿಹ ಆಭರಣಗಳನೂ॥ ಒಳ
ಗಡೆಯೊಳೆಲ್ಲಾದ ನೋಡಿಬಲ್ಲೆಯನೀನು। ತಿಳಿದಿರಲು ವಂಚಿಸದೆಪೇಳು॥ ೩॥ ಬಲ್ಲೆ
ಬಲ್ಲೆನುಬುದ್ಧಿ ಚನ್ನಾಗಿನಾಬಲ್ಲೆ। ಎಲ್ಲ ಒಡವೆಗಳ ಪರಿಚಯವೂ॥ ಉಲ್ಲಸದಿತೊಡಿಸಿ
ಕಂಗಳ ಆಸರೆಯತಣಿಸಿ। ದೆಲ್ಲಿಮರೆವುದು ತನಗೆ ಎಂದಾ ॥೪॥ ಅರಸಕೇಳಿದನಾಗ
ಆಮಾತ್ಯರೇನೀವು॥ ಧರಿಸಿದಾಭರಣಗಳು ಎಲ್ಲಿಯದುಎನುತಾ॥ ದೊರೆಕುಮಾರಕನೊ
ಚನೆ ವತ್ತ್ರಕರಕಡೆಯಿಂದ। ಕ್ರಯಲಬ್ಧಮಾಗಿ ಬಂತೆನಲು ರಾಕ್ಷಸನೂ ॥೫॥

ರಾಗ ಕೇದಾರ ಗೌಳ ಝಂಪೆ

ಕೇಳಿದೆಯ ಚಾರನೀನು। ರಾಕ್ಷಸನು। ಪೇಳಿರುವ ನುಡಿಗಳನ್ನೂ॥ ಆಲಿಯಾಡಿಸಿ ಒಡ
ವೆಯಾ। ನೋಡಿನೀ। ಪೇಳುವುದು ನಿಜದಸ್ಥಿತಿಯಾ ॥೧॥

ರಾಗ ಮಾರವಿ ಏಕತಾಳ

ಕುಸುಮಪುರಕೆ ವಿಜಯಾರ್ಥದಿ ಪೊರಟಿಹ। ವಸುಮತಿಪಾಲಕಗೇ। ಹಸನಾಗಿದನಾ
ತೊಡಿಸಿದ ವಡವೆಯು। ಪೊಸತಲ್ಲವುಎನಗೇ ॥೧॥

ರಾಗ ನೀಲಾಂಬರಿ ರೂಪಕತಾಳ

ಒಡವೆ ನಿರೀಕ್ಷಣೆಇಂದಲಿ। ಪೊಡವಿಪ ತಂದೆಯ ನೆನೆಯುತ। ಕಡುದುಃಖದಿಕಂಬನಿ।
ವಡೆಯಲು ಹಾಎನುತಾ ॥೧॥ ಹಾಕುಲಭೂಷಣ ತಂದೆಯೆ। ಹಾಕುಲದೀಪಕ ನ
ಜನಕನೆ। ಹಾಕುತಒಡವೆಯ ಪೊರಟರೆ। ಲೋಕಾನಂದದೊಳೂ ॥೨॥ ನಕ್ಷತ್ರಗಳಾ
ಮಧ್ಯದಿ। ಈಕ್ಷಿಸಚಂದ್ರಮನಂದದಿ। ಅಕ್ಷಿಗೆತೋರುತ ಜಗದ। ಧ್ಯಕ್ಷತೆವಹಿಸಿರಲೂ
॥೩॥ ಶತೃಗಳ್ಕಪಟಕೆ ಶಿಲುಕುತ। ಪುತ್ರನನಾಥನಮಾಡಿದೆ। ಧಾತ್ರಿಯೊ ಳೆನಗಿಲ್ಲವು।
ಮಿತ್ರನುಹಾಎನುತ॥೪॥ ಆತತಾಯಿಗ ಳೆಂದರಿಯದೆ। ಪ್ರೀತಿಯೊಳ್ಸಲಹಿರೆ ಅರಸರ।
ಘಾತುಕರಾದರೆ ಅಕಟಾ। ಈತೆರಕೃತ್ರಿಮದೀ ॥೫॥

Scanned by CamScanner

ರಾಗ ಕೇದಾರಗೌಳ ಅಷ್ಟತಾಳೆ

(ಅಮಾತ್ಯರಾಕ್ಷಸ) ದೃಢವಾಯ್ತುಮನಕೀಗ ಪರುವತರಾಜನ। ಒಡವೆನಾ ಧರಿಸಿ ಹುದೂ॥ ಕಡುಗಲಿಚಾಣಿಕ್ಯ ಕಪಟದಿವರ್ತ್ತಕ। ರೊಡನಿದಕಳುಹಿರಲೂ॥೧॥ ಅರಿಯದೆಕೊಂಡೆನು। ಧರಿಸುತ್ತ ಬಂದೆನು। ದೊರೆಯು ಅರಿತುಇದನೂ॥ ಹೊರಿಸಲುಬಹುದೀಗ ದೋಷವನೆನ್ನುತ। ಒರೆವನು ರಾಕ್ಷಸನೂ ॥೨॥ ಅರಸನು ಬಾಗುರಾಯಣನೊಳುಕೇಳಿದ। ಧರಿಸಿದನೈಘತ್ಯವೂ॥ ಪರರಿಂದಕ್ರಯಲಬ್ಧ ವಾಗಿಹುದೆನ್ನುತ। ಲೊರೆದನು ರಾಕ್ಷಸನೂ॥೩॥ ನಿನಗೆಸಮ್ಮತವಾಯ್ತೆ ರಾಕ್ಷಸನುಡಿದುದು। ಎನಗೆ ಸಮ್ಮತವಾಗಲು॥ ಮನದೊಳು ತರ್ಕಿಸಿ ನುಡಿಯಬೇಕೆನುತಲಿ। ಜನಪಾಲ ಸುತನೆಂದನೂ ॥೪॥

ರಾಗ ಬೇಗಡೆ ಅಷ್ಟತಾಳೆ

(ಬಾಗುರಾಯಣ) ದೊರೆಕುಮಾರಕ ಕಾಗದವೊ ಳಿಹುದೂ। ಇದನೋಡಿಪೇಳ್ದರೆ। ವರವಿಭೂಷಣ ಮುಟ್ಟಿ ತೆಂಬುವುದೂ॥ ಇರುವುದಿದೆ ಮಂಡನವುಎಂಬುದ। ಸ್ಥಿರಪಡಿಸಿ ತೋರುವುದು ಆದರೆ। ಪರಿಯುಬೇರಿರ ಬಾರದೇಕೈ। ಅರಿಯಬಾರದೆ ಅನ್ಯಅರ್ಥದಿ ॥೧॥ ಧರೆಯೊಳಗೆಪರರಾಜ ರೊಡವೆಗಳೂ। ನೈವಶಗಳಾದರೆ। ಅರಸುಗಳು ಕಟ್ಟಿಸುತಭವ್ರದೊಳೂ॥ ಇರಿಸಬಯಸುವರ್ ಖ್ಯಾತಿಗೋಸುಗ। ಪರುವತನ ಮಂಡನವು ಅಂತೆಯೆ। ಇರಿಸಿರಲುಚಾಣಿಕ್ಯ ಮೌರ್ಯಜ। ನರಿಯದಾತನು ಪೋದಕಾಲದಿ ॥೨॥ ತನಗೆ ಬೇಕಾದವರ ಪ್ರೀತಿಯನೂ। ಸಂಪಾದಿಸಲಿಕೀ। ಕನಕನವರತ್ನಗಳ ಒಡವೆಯನೂ॥ ಮನೆಯಭಂಡಾರದಲಿ ತೆಗೆಯಿಸು। ತಿನಿತುಬಂದಿಹ ಪರಿಯನರಿಯದೆ। ಜನರೊಡನೆಕಳಿಸಿರಲು ಬಹುದೆನೆ। ಮನಕೆ ವಪ್ಪಿತು ಎನಲು ನೃಪಸುತ ॥೩॥

ರಾಗ ಕೇದಾರಗೌಳ ಅಷ್ಟತಾಳೆ

(ಮಲಯಕೇತು) ಚಂದ್ರಗುಪ್ತನು ಭೂಷಣಂಗಳ ಕಳಿಸುತ್ತ। ಹೊಂದಿಸಿಕೊಳಲುನಿಮ್ಮ। ಹಿಂದೆ ಪ್ರಯತ್ನವ ಮಾಡಿದನೀವೆಮ್ಮ। ಇಂದುಆತಗೆವಪ್ಪಿಸೀ॥೧॥ ಅಧಿಕಾರ ಲಾಭವ ಪಡೆಯಬೇಕೆನ್ನುತ। ವಿಧವಿಧ ತಂತ್ರದೊಳೂ॥ ಹುದುಗಿಸಿಕಪಟವ ಬಾಯೊಳಾಮಾತ್ಯರೆ। ಅಧಿಕಲಾಭವ ತೋರ್ದಿರೀ ॥೨॥ ನೃಪತಿಯಮಾತಿಗೆ ರಾಕ್ಷಸ ಶಿವಶಿವ। ಅಪವಾದಬಂತೆನಗೇ॥ ಕಪಟದಿ ಚಾಣಿಕ್ಯ ತಂದನು ಎನಗಿಂಥ। ಉಪಹತಿಯನುತಲಿರೆ॥೩॥ ಎಲವೊ ರಾಕ್ಷಸನೆ ತಂದೆಗೆಮಿತ್ರ ನೆನುತಿಲ್ಲಿ। ಸ್ಥಳವಿತ್ತೆನಿನ್ನನಂಬೀ॥ ಬಳಿಕೆನ್ನ ಸರ್ವಸ್ವತಂತ್ರವನೊಪ್ಪಿಸಿ। ಬಳಿಯೊಳು ಭೃತ್ಯನಂತೆ ॥೪॥ ಇರುತಿರೆನೀನು ಕೊಟ್ಟರೆ ಉಂಟು ಎನಗಿಲ್ಲಿ। ಅರಸನಾಚಂದ್ರಗುಪ್ತ॥ ಕರುಣಿಸಿದರೆಮಾತ್ರ ನಿನಗುಂಟು ಭೃತ್ಯನಾ। ಗಿರಲುಇಚ್ಛಿಸಿದೆಯಲ್ಲಾ ॥೫॥ ನಿನ್ನದುಷ್ಕೃತ್ಯವೆ। ನಿನ್ನನುಕೆಡಿಸಿತು। ಅನ್ಯರೊಳಪವಾದವ। ಇನ್ನುನೀಹೊರಿಸುತ ಶುಭಗನೆಂದೆನುತಲಿ। ಎನ್ನೊಳಗಿರುಹುವೆಯಾ ॥೬॥

ರಾಗ ನೀಲಾಂಬರಿ ರೂಪಕತಾಳೆ

ಎನ್ನಯದುಷ್ಕೃತ ವೆನ್ನುತ। ಇನ್ನುನೀಅರುಹುವು ದುಚಿತವು। ನಿನ್ನೊಳುದೋಷಗಳಿಲ್ಲವು। ಎನ್ನುತಲಳುತಿರಲೂ ॥೧॥

ರಾಗ ಕೇದಾರಗೌಳ ಝಂಪೆ

ಕೃದ್ಧನಾಗುತಲರಸನೂ। ಪತ್ರಸಹಿ। ತೆದ್ದುಪೆಟ್ಟಿಗೆ ಗೊಂಡನೂ॥ ಬದ್ಧಭೃಕುಟಿಯೆ ಕೇಳೆಲೋ। ಕೊಳುತಿದನು। ಹುದ್ದೆಫಳಿಸಿಕೊ ನೀನೆಲೋ ॥೧॥ ಎನುತನೆಲಕೆಸೆಯುತದನೂ। ರಾಕ್ಷಸನೆ। ಕೆನಿಸಿಲ್ಲದಂತೆಸೀನೂ॥ ಇನಿತುದೋಷವ ಪರರೊಳೂ। ತೋರಿಸುತ। ನುಣಿಚಿಕೊಳ್ಳುವೆ ಎನ್ನೊಳೂ ॥೨॥

ರಾಗ ನೀಲಾಂಬರಿ ರೂಪಕತಾಳೆ

ಅರಸನೆಮೊದಲಿಗೆ ಭೃತ್ಯರ। ತೆರದೊಳಗಿದ್ದೆನು ಲೋಕೇ। ಶ್ವರರಾನಂದರು ಗೈದಿಹ। ಶಿರಿಸನ್ಮಾನದೊಳೂ ॥೧॥ ಲೋಕದಿಪೂಜ್ಯತೆ ಹೊಂದಿದೆ। ಲೋಕೇಶ್ವರರಾ ನಂದರು। ಲೋಕವ ಬಿಟ್ಟೈದಲುಪರ। ಲೋಕಕೆ ಯುದ್ಧದಲೀ ॥೨॥ ಶತ್ರುಗಳಿಗೆ ಈಗೆನ್ನನು। ಭೃತ್ಯನಮಾಡುತ ಸ್ವಾಮಿಯ। ಭಕ್ತಿಯೊಳ್ಮಾಡುವ ಕಾರ್ಯಕೆ। ಇತ್ತತಿ ವಿಘ್ನವನೂ ॥೩॥ ಪರಿಯವಸಾನವ ಗೊಳಿಸದೆ। ಇರುತಿರೆ ದೈವವಿಲಾಸವು। ಹೊರತಾಗಿಲ್ಲವು ಅನ್ಯರ। ದಿರದೈ ದೋಷಗಳೂ ॥೪॥

ರಾಗ ಭೈರವಿ ಝಂಪೆ

(ಮಲಯಕೇತು) ನಿನ್ನ ಹೃದಯವ ನರಿಯದೇ ತಂದೆ ದಕ್ಷಕನು। ಉನ್ನತದ ಮತಿವಂತ ಸತ್ಯಸಂಧಕನೂ॥ ಎನ್ನುತಲಿ ತನಗೆಬಹ ನಂದರಾಜ್ಯದೊಳರ್ಧ। ಕಿನ್ನು ನಿನ್ನಧಿಪತಿಯ ಮಾಡಬೇಕೆನುತಾ ॥೧॥ ಮಿತ್ರನೀನೆನ್ನುತಲಿ ಆಮಾತ್ಯಪದದಲ್ಲಿ। ಇತ್ತುಅಧಿಕಾರವನೆ ನಿನಗೇ॥ ತೃಪ್ತಿಹೊಂದಿಸಲೆಳಸಿ ಇರೆತ್ಯಾಗಸೀಲರನು। ಮೃತ್ಯುಗೊಪ್ಪಿಸಿದೆನೀ ವಿಷಕನ್ಯೆ ಮುಖದೀ ॥೨॥ ಅರಿಯದಲೆನಿನ್ನ ಹೃದಯವ ಎನ್ನತಂದೆಯಾ। ಪರಮಮಿತ್ರನು ಎನುತ ನಿನಗೇ॥ ಧರೆಯಸರ್ವಾಧಿಕಾರವ ನಿತ್ತೆಎನ್ನನೀ ದೊರೆಚಂದ್ರಗುಪ್ತನಿಗೆ ಒಪ್ಪಿಸಲುಪೊರಟೆ ॥೩॥
(ಆಮಾತ್ಯ ರಾಕ್ಷಸ) ಕೊಂದವನುನಾನಲ್ಲ ನಿನ್ನತಂದೆಯಅರಸ। ನಿಂದಿಸಲು ಮಿತಿಯುಂಟು ಎನ್ನಹೃದಯವನೂ॥ ಇಂದುನೀನರಿಯೆ ದೈವವಕೇಳೆ ತಿಳಿಯುವುದು। ಎಂದನಾ ಮಾತ್ಯರಾಕ್ಷಸನೂ ॥೪॥
(ಮಲಯಕೇತು) ದೈವವನುಕೇಳಿ ತಿಳಿಯಲುಬೇಕೊ ಈಗಳಾ। ಜೀವಸಿದ್ಧಿಯ ಕೇಳಬೇಡವೋ ಎನುತಾ॥ ಸೇವಕನಕರದೊಂದು ಕಾಗದವಬರದಿತ್ತು। ಧಾವಿಸುತ ಸೇಖರಗೆ ಕೊಟ್ಟುಬಾರೆನಲು ॥೫॥

Scanned by CamScanner

ರಾಗ ನೀಲಾಂಬರಿ ರೂಪಕತಾಳೆ

(ಅಮಾತ್ಯ ರಾಕ್ಷಸ) ಶಿವಶಿವಬಂದಿತು ಯಾರಿಗೊ। ಭವಣೆಯು ಚಾರನುಪೋಗಿಹ। ಪವನನ ವೇಗವನೋಡಲು। ಜವಗೆಟ್ಟಿತು ಮನವೂ ॥೧॥ ಕ್ಷಪಣಕ ಎನ್ನೊಳಗೀಪ ರಿ। ಕಪಟದಿವಂಚಿಸಿ ಸ್ನೇಹದೀ। ಗುಪಿತವ ಚಾರಕನಾಗಿರೆ। ಅಪಯಶಬಂತೆನಗೇ॥೨॥ ಎನುತಲಿ ರಾಕ್ಷಸ ತನ್ನಯ। ಮನದೊಳು ಅಳಲುತ ಕಷ್ಟವ। ನೆನೆಯುತ ಹಾಶಂಕ ರನೇ। ಜನುಮವೆಸಾಕೆನಲೂ ॥೩॥

ರಾಗ ಕೇದಾರಗೌಳ ಅಷ್ಟತಾಳೆ

ಇತ್ತಲಾಚಾರನು ಅರಸನು ಕೊಟ್ಟಿಹ। ಪತ್ರವ ಸೇಖರಗೇ॥ ಇತ್ತುಆತನು ಬರದಿತ್ತಿಹ ಉತ್ತರ। ಮತ್ತಾತ ತಂದೀಯಲು ॥೧॥ ಎಲವೊಚಾರನೆ ನಡೆದಿಹುದೇನು ಮತ್ತಲ್ಲಿ। ತಿಳುಹೆನಲರಸನಾಗ॥ ಬಳಿಯೊಳುನಿಂದು ಕೈಜೋಡಿಸಿಪೇಳಿದ। ಮಲಯಕೇತುವಿನೊಡನೆ ॥೨॥ ಪತ್ರವನೋಡಿದ ಕ್ಷಣದಲ್ಲಿ ಸೇಖರ। ನಿತ್ತನುಅಪ್ಪಣೆಯ॥ ಮತ್ತಿದೆರಾಜ ಕಾರ್ಯಾರ್ಥದಿ ಬಹುದೆಂದು। ಚಿತ್ರವರ್ಮಾದ್ಯರಿಗೇ ॥೩॥ ಚಿತ್ರವರ್ಮನ ಪುಷ್ಕರಾಕ್ಷನ ಮಲಯನೃ। ಪೋತ್ತಮ ಸಿಂಹನಾದ॥ ಮತ್ತೆ ಈಮೂವರ ಭೂಗತಮಾಡಿಸಿ ಮತ್ತಗಜದಕಾಲಿಗೆ ॥೪॥ ಬಳಕಿಹ ಮೇಘನಾದನ ಸಿಂಧುಷೇಣರ। ಛಲದೊಳು ಕಟ್ಟಿಸುತ॥ ಎಳೆಸಲು ಅಸುನೀಗೆ। ತಿಳಿದುಬಂದಿಹೆನೆಂದು। ಮಲಯಕೇತುವಿ ಗೆಂದನು ॥೫॥

ವಾರ್ಧಿಕೆ

(ಮಲಯಕೇತು) ಎಲವೊ ರಾಕ್ಷಸನಿನ್ನ ಸ್ನೇಹಮಂಬಳಸಿರ್ಪ। ರಿಳೆಯಭೋಗವ ತೊರೆದು ಚಿತ್ರವರ್ಮಾದಿಗಳು। ಕಳೆದುಕೊಂಡರುಅಸುವ ನಿನ್ನಂತೆ ವಿಶ್ವಾಸಘಾತಕನು ನಾನಲ್ಲವೈ। ಕುಲದೊಳಗೆ ಬ್ರಾಹ್ಮಣನು ನೀನಿರುವೆ ನಿನ್ನನಾಂ। ಉಳಿಸಿಪ್ರಾಣವು ಸಹಿತ ಕಳುಹುವೆಂ ಇಲ್ಲಿಂದ। ಬಳಿಕಲಾ ಚಂದ್ರಗುಪ್ತನಸೇರಿ ನೀಮಾಳ್ಪ ರಾಜಕಾರ್ಯವ। ಮಾಡಿಕೊ ॥೧॥

ರಾಗ ಭೈರವಿ ಝಂಪೆ

ಪ್ರೊಢವಿಯೊಳುದುರ್ನೀತಿ ಧರ್ಮಾರ್ಥಕಾಮಗಳ। ಕೆಡಿಸುವಂದದಿ ಚಂದ್ರಗುಪ್ತನಸಹಿತಾಗಿ॥ ಕಡುಪಾಪಿಗಳನು ನಿಗ್ರಹಿಸಲಿಕೆಸಿದ್ಧನಾ। ನೊಡನೆನೋಡೆಂದರಾಕ್ಷಸಗೇ ॥೧॥

ರಾಗ ಸೌರಾಷ್ಟ್ರ ತ್ರಿವುಡೆ

(ಬಾಗುರಾಯಣ) ದೊರೆಕುಮಾರಕ ವಿಜಯಯಾತ್ರೆಗೆ। ತೆರಳುವರೆ ಈ ಲಗ್ನ ಶುದ್ಧಿಯೊ। ಳಿರದುಮತ್ತೊಂದಿರಿಸಿಲಗ್ನವ। ತೆರಳಬೇಕೈ ॥೧॥ ಎನುತಲುಸುರುತ ಬಾಗುರಾಯಣ। ನಿನಗೆ ವಿಶ್ರಾಂತಿಗಳು ಬೇಡವೆ। ಇನಿತು ಶೋಷಣೆ ಮಾತಿನಿಂದಲಿ

ಫಲಗಳೇನು ॥೨॥ ಚಿತ್ರವರ್ಮಾದಿಗಳ ವಾಹನ। ಉತ್ತಮದ ವಡವೆಗಳ ಜನಗಳು। ಎತ್ತಿವಯ್ಯದ ಹಾಗೆ ಶೇಖರ ನೋಡಿಕೊಂಡು ॥೩॥ ಅರಸುಕೋಶಕೆ ಸೇರಿಸಲುನೀ। ಕರಸಿಶೇಖರನಿಗೆ ನಿರೂಪಿಸು। ಇರಿಳಿನೊಳು ಮೂರ್ಖನುಕಳೆಯಿತು। ತ್ವರಿತಗೊಳಿಸು ॥೪॥ ಕರಸಿಶೇಖರ ನೊಡನೆಅರಸನು। ತ್ವರಿತದಿಂ ಸೇನೆಯ ನೆಕೊಡುತ ತೆರಳಿನೀನಾ ಚಿತ್ರವರ್ಮಾ ದ್ಯರಸರುಗಳ ॥೫॥ ವಡವೆವಸ್ತುಗ ಳೆಲ್ಲವನುನೀ। ಪಡೆದುನಮ್ಮಯ ಬೊಕ್ಕಸಕೆತಂ। ದಿಡುವುದೆನ್ನುತ ಲಪ್ಪಣೆಯ ಕೊಡುತಿರಲಿಕಾಗ ॥೬॥ ಧನಿಯ ಅಪ್ಪಣೆಯಂತೆ ಶೇಖರ। ತನಗಗತ್ಯದ ಸೇನೆಸಹಿತಲಿ। ಜನ ಪನಿಗೆ ವಂದಿಸುತ ತೆರಳಿದ ಬಳಿಕಲಿತ್ತ ॥೭॥

ರಾಗ ಕೇದಾರಗೌಳ ಅಷ್ಟತಾಳೆ

ಈಗಳಾಮಾತ್ಯರ ಭೃತ್ಯನಿಗಪ್ಪಣೆ। ಯಾಗಬೇಕೆನ್ನುತಲೀ॥ ಬಾಗುರಾಯಣನಾಗ ಅರಸನೊಳ್ಪೇಳಲು। ಆಗಲೆನ್ನುತಲವನು॥೧॥ ದೂತನಸಿಕ್ಷಿಸ ಕೂಡದೆಥಾರ್ಥವ। ನಾತನು ಪೇಳಿಹನೂ॥ ಈತತುಕ್ಷಣದೊಳು ಭೃತ್ಯನಕರೆಸಿ ಅ। ಮಾತ್ಯನ ಜೊತೆಗೊಳಿಸೀ॥೨॥ ಎರಡುಜನಗಳನ್ನು ನಮ್ಮಯದೇಶದಿಂ। ಹೊರಡಿಸಿ ಈಗಳೆಂದೂ॥ ಅರಸುಅಪ್ಪಣೆ ಇತ್ತು। ತೆರಳೆವಿಶ್ರಾಂತಿಗೆ ದೊರೆಕುಮಾರರಸಹಿತಾ॥೩॥ ಬಾಗುರಾಯಣನಾಗ ಯೋಚಿಸಿ ಮನದೊಳು। ಯೋಗಕೆಟ್ಟಿಹಕಾಲದಿ॥ ತಾಗುವದೈಯ್ಯ ಆಮಾತ್ಯರೆ ದುರ್ವಿಧಿ। ಸಾಗಿರಿ ಗೃಹಕೆಈಗ ॥೪॥ ಮಲಯಕೇತುವಿನೊಳು ನಾಳಿನ ದಿವಸದಿ। ಹಲವು ಪ್ರಯತ್ನದಿಂದ। ತಳೆದಿಹ ಕೋಪವ ತಣಿಸಿಮಾತಾಡಿಸಿ। ತಿಳುಹುವೆ ನಿಮಗೆಂದನು ॥೫॥ ಹಿಡಿಸಲಾರದ ದುಃಖ ಸಂತೋಷ ವೆರಡರಿಂ। ನೆಡೆಯೆರಾಕ್ಷಸ ಗೃಹಕೇ। ಕಡುಗಲಿ ಬಾಗುರಾಯಣ ಮುಖ್ಯರೆಲ್ಲರು। ಒಡನೆಪೋದರುಗೃಹಕೇ ॥೬॥

ಭಾಮಿನಿ

ಅರಿತವನು ನಾನಲ್ಲ ಸಂಸ್ಕೃತ। ವಿರದುಯನ್ನಲಿ ಚ್ಛಂದಸ್ಯಾಸ್ತ್ರದ। ಮರುಮವನು ನಾನರಿಯೆ ವಾಗೀಶ್ವರಿಯ ದಯೆಇಂದಾ॥ ವಿರಚಿಸಿದೆನಾ ಚಣಕಪುತ್ರನ ಚರಿತೆಯೊಳ ಗಾಮಾತ್ಯರಾಕ್ಷಸ। ನಿರಸನದ ಕಥೆಎಂಬಗದ್ಯವ ಪದ್ಯರೂಪಡಲಿ ॥೧॥

ರಾಗ ಕೇದಾರಗೌಳ ಅಷ್ಟತಾಳೆ

ಮೆರೆವಕರ್ನಾಟಕ ಸುರಭಿಪುರದ ಪ್ರಾಂತ್ಯ। ಇರುವ ಉಳವಿ ಹೋಬಳೀ॥ ಕೆರೆಯ ಕೊಪ್ಪದೊಳಿರ್ಪ ಬೇಳೂರ ಹನ್ಯಕ। ವರ ಮಂಜುನಾಥನೆಂಬ ॥೧॥ ಪೆಸರಿನ ಕೃಷಿಕನು ಚಾಣಿಕ್ಯ ಚರಿತೆಯೊ। ಳಸಮಸಾಹಸಿ ಯಾಗಿಹ। ವಸುಧೆಪಾಟಲಿ ಪುರ ದಾಮಾತ್ಯರಾಕ್ಷಸ। ನೆಸಗಿದ ಕರ್ತವ್ಯದಾ॥೨॥ ಪರಿಯನು ನಾನೀಗ ದೃಶ್ಯಕಾವ್ಯವನಾಗಿ। ವರಯಕ್ಷಗಾನದೊಳು॥ ವಿರಚಿಸಿಕಲೆಗೊಂದು ಕಾಣಿಕೆ ಇತ್ತಿಹೆ। ಧರೆಯ ವಿದ್ವಜ್ಜನ

Scanned by CamScanner

ರೂ ॥೩॥ ಅಪ್ಪುತಪ್ಪುಗಳನ್ನು ವಪ್ಪವಗೊಳಿಸುತ್ತ। ಸಪ್ಪೆಯಾಗದ ತೆರದೀ॥ ಇಪ್ಪುದ ನಟರಿಗೆ ಅರಿವಾಗುವಂತೆಸ। ಮರ್ಷಕ ದೊಳಗರುಹೀ ॥೪॥ ರಂಗಭೂಮಿಗೆ ತಂದು ಲೋಗರಮನಸಿಗೆ। ಕಂಗಳು ಶ್ರೋತ್ರಿಯಕೆ॥ ಹಿಂಗಿಸಿಆಸರೆ ಎಂದು ನಾ ಬೇಡುತ। ಮಂಗಳ ಗೈಯ್ಯುವೆನು॥೪॥

ರಾಗ ಡವಳಾರ

ಮಂಗಳ ಗಿರಿಜೇಶ ಸ್ವಾಮಿಶಂಕರನಿಗೆ। ಮಂಗಳ ದುಗ್ದಾಬ್ಧಿ ವಾಸನಿಗೇ। ಮಂಗಳ ಮತ್ಸ್ಯಾದಿ ದಶರೂಪತಾಳಿದ। ತುಂಗವಿಕ್ರಮಿ ಲಕ್ಷ್ಮೀಕಾಂತನಿಗೇ। ಮಂಗಳಂ ಜಯ ಮಂಗಳಂ ॥೧॥ ಕೆರೆಯಕೊಪ್ಪದೊಳಿಹ। ಕರಿಮುಖಗಣಪಗೆ। ಸರಸತಿ ಶ್ರೀಲಕ್ಷ್ಮಿ ಉಮೆಯರಿಗೇ। ಗಿರಿಯೊಳು ನೆಲಸಿಹ ವೆಂಕಟರಮಣಗೆ। ಗುರುರಾಘವೇಂದ್ರ ಭಾರತಿಯರಿಗೇ॥ ಮಂಗಲಂ ಜಯ ಮಂಗಲಂ ॥೨॥ ಸುರಭಿಯಪುರದೊಳು। ಸ್ಥಿರವಾಗಿ ನೆಲಸಿಹ। ದುರಿತನಾಶನ ರಂಗನಾಥನಿಗೇ। ಕರುಣದಿಭಕ್ತರ ಸಲಹುವ ಬೇಳೂರ। ವರವಿರೂಪಾಕ್ಷೇ ಶ್ವರನಡಿಗೇ। ಮಂಗಲಂ ಜಯ ಮಂಗಲಂ ॥೩॥